ಬಿಡುವುದಿಲ್ಲ. ಬರುವ ವರ್ಷದಲ್ಲಿ ಕರ್ನಾಟಕ ರಿಫಾರ್ಮ್ಸ್ ಪ್ರಾಜೆಕ್ಟ್‌ನಲ್ಲಿ ಇದನ್ನು ಸೇರಿಸಿ ಸದರಿ ಕೆಲಸವನ್ನು ಪೂರ್ಣಮಾಡಿ ಕೊಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಮಾನ್ಯ ನಿರ್ಮಲ್ ಸುರಾನರವರೆ, ತಮ್ಮ ಪ್ರಶ್ನೆಯನ್ನು ವಸತಿ ಇಲಾಖೆಗೆ ವರ್ಗಾಹಿಸಲಾಗಿದೆ. ಈಗ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳು.

2(ಅ) ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 25.1.2005ರ 2ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 196 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ--1)

ಅಧ್ಯಕ್ಷರು : ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ: ಬೆನ್ನಿಹಿನ್ ಕಾರ್ಯಕ್ರಮ ಕುರಿತು

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ ಅಥವಾ ಯಾವುದೇ ರೂಲ್ ಪ್ರಕಾರ ಪ್ರಮುಖವಾದಂಥ ಒಂದು ವಿಷಯವನ್ನು ತೆಗೆದುಕೊಳ್ಳಬೇಕೆಂದು ನೆನ್ನೆ ದಿವಸ ಬೆನ್ನಿಹಿನ್ ಕಾರ್ಯಕ್ರಮದ ಹಿನ್ನಲೆಯಲ್ಲಿ ನಾನು ತಮ್ಮ ಗಮನಕ್ಕೆ ತಂದಿದ್ದೆ. ನೆನ್ನೆದಿವಸ ಈ ವಿಷಯವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ, ನಾನು ಇವತ್ತು ತಮ್ಮ ಕೊಠಡಿಗೆ ಬಂದು ತಮ್ಮ ಜೊತೆ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಮಾತನಾಡುವುದಕ್ಕೆ ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಸಂಕ್ಷಿಪ್ತವಾಗಿ ಹೇಳುತ್ತೇನೆ. ಇವತ್ತು ಬೆಳಿಗ್ಗೆ 6.00 ಗಂಟೆಗೆ ನಾನು ಜಕ್ಕೂರ್ ವಿಮಾನ ನಿಲ್ದಾಣಕ್ಕೆ ಹೋಗಿದ್ದೆ. ಅಲ್ಲಿನ ಕಾರ್ಯಕ್ರಮಕ್ಕೆ ಚೆನ್ನೈನಿಂದ ಮೈಕ್‌ಸೆಟ್ ಮತ್ತು ಇತರೇ ಸಾಮಗ್ರಿಗಳು ಬಂದಾಗ ಇದಕ್ಕೆ ಕಟ್ಟಬೇಕಾಗಿದ್ದಂಥ 80 ಸಾವಿರ ರೂಪಾಯಿ ಕೊಟ್ಟಿಲ್ಲವೆಂದು ಮತ್ತು ಸುಂಕ ಮತ್ತು ವಲಸೆ ವಿಭಾಗದ ಅಧಿಕಾರಿಗಳು ಬೆನ್ನಿಹಿನ್ ವಿಮಾನದಲ್ಲಿದ್ದಾಗ ಅಲ್ಲಿಗೆ ಹೋಗಿ ತೆರಿಗೆ ಹಣ ಪಾವತಿ ಮಾಡಿಲ್ಲ ಎಂದು ಅವರನ್ನು ತಡೆದು ಕೇಳಿದಾಗ ಆ ಸಂದರ್ಭದಲ್ಲಿ ಮಾತಿನ ಚಕಮಕಿ ಆಗಿರತಕ್ಕಂಥ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ನಾನೂ ಕೂಡ ನೋಡಿದ್ದೇನೆ. ಇವತ್ತು ಜಕ್ಕೂರು ವಿಮಾನ ನಿಲ್ದಾಣ ಸಂಪೂರ್ಣವಾಗಿ ನಾಶವಾಗಿದೆ. ಮತ್ತೆ ಸುಮಾರು 8–10 ಲಾರಿ ತುಂಬುವಷ್ಟು ಪ್ಲಾಸ್ಟಿಕ್ ಚೀಲಗಳು ಅಲ್ಲಿ ಬಿದ್ದಿವೆ. ಮತ್ತೆ ಸಾಕಷ್ಟು ಗುಂಡಿಗಳು ಅಲ್ಲಿ ಬಿದ್ದಿವೆ. ಇನ್ನು ಎರಡು ತಿಂಗಳಾದರೂ ಅಲ್ಲಿ ವಿಮಾನ ಯಾನ ಮಾಡುವುದಕ್ಕೆ ಆಗದೇ ಇರತಕ್ಕಂಥ ವಿಚಿತ್ರ ಪರಿಸ್ಥಿತಿ ಅಲ್ಲಿ ತಲೆದೋರಿದೆ. ಈ ನಿಲ್ದಾಣವನ್ನು ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ವೈಮಾನಿಕ ಉದ್ದೇಶಕ್ಕಾಗಿ ಬಳಸುತ್ತಿದ್ದರು. ಇಲ್ಲಿ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಕೂಡ ಇದೆ. ಕಳೆದ ನಾಲ್ಕು ತಿಂಗಳಿಂದ ಈ ಒಂದು ಕಾರ್ಯಕ್ರಮಕ್ಕೆ ಕೆಲಸ ಪ್ರಾರಂಭವಾಗಿತ್ತು. ಇದಕ್ಕೆ ಯಾರು ಪರ್ಮಿಷನ್ ಕೊಟ್ಟಿದ್ದರು? ಮತ್ತು ಬೆನ್ನಿಹಿನ್ ಬರುತ್ತಾನೆಂದು ಯಾರು ಅವರಿಗೆ ತಿಳಿಸಿದ್ದರು? ಇದಕ್ಕೆ ನೀವು ಮೌಖಿಕವಾಗಿ ಯಾವರೀತಿಯಾಗಿ ಅನುಮತಿ ಕೊಟ್ಟಿದ್ದೀರಿ? ಸಂಬಂಧಪಟ್ಟಂಥ ಇಲಾಖೆಯಿಂದ ಅಂದರೆ, ಏರ್‌ಪೋರ್ಸ್ ಅಥಾರಿಟಿಯಿಂದ ಈ ಮೈದಾನ ಉಪಯೋಗ ಮಾಡುವುದಕ್ಕೆ ಅನುಮತಿ ತೆಗೆದುಕೊಂಡಿದ್ದೀರಾ? ಆದ್ದರಿಂದ, ಇದಕ್ಕೆ ತಾವು ಹೇಗೆ ಅನುಮತಿ ಕೊಟ್ಟಿದ್ದೀರಿ? ಇದು ನನ್ನ ಮೊದಲನೇ ಪ್ರಶ್ನೆಯಾಗಿದೆ. ಎರಡನೇ ಪ್ರಶ್ನೆ

ಏನೆಂದರೆ, ಮೂರು ದಿವಸಗಳ ಈ ವೈಭವದ ಕಾರ್ಯಕ್ರಮವಾದಾಗ ನೆಲ ಬಾಡಿಗೆ ಎಷ್ಟು ಎಂದು ಫಿಕ್ಸ್ ಮಾಡಿದ್ದೀರಿ? ಮತ್ತೆ ಈಗಾಗಲೇ ಎಷ್ಟು ಹಣವನ್ನು ವಸೂಲ್ಮಾಡಿದ್ದೀರಾ? ಇವತ್ತಿನದಿವಸ ಅಲ್ಲಿ ಇಡೀ ಮೈದಾನ ಗುಂಡಿ ಬಿದ್ದಿರುವಂಥದ್ದನ್ನು ರಿಪೇರಿ ಮಾಡುವುದಕ್ಕೆ ಸುಮಾರು ಹತ್ತಾರು ಲಕ್ಷ ರೂಪಾಯಿ ಬೇಕಾಗುತ್ತದೆ. ಈ ಹಣವನ್ನು ಯಾರು ಭರಿಸುತ್ತಾರೆ? ಮೂರನೇ ಪ್ರಶ್ನೆ ಏನೆಂದರೆ, ಸುಮಾರು 10 ರಿಂದ 12 ಸಾವಿರ ಪೊಲೀಸ್‌ನವರ ರಕ್ಷಣೆಯೊಂದಿಗೆ ರೆಡ್ ಕಾರ್ಪೆಟ್ ಹಾಸಿ ಈ ಕಾರ್ಯಕ್ರಮ ನಡೆಸಿದ್ದು, ಇದರ ವೆಚ್ಚವನ್ನು ಯಾರು ಭರಿಸುತ್ತಾರೆ? ಸುನಾಮಿ ದುರಂತದ ನಂತರ ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾದ ಯಾವುದೇ ಕಾರ್ಯಕ್ರಮ ನಡೆಯಬಾರದೆಂದು ದೊಡ್ಡ ದೊಡ್ಡ ಮಠಾಧಿಪತಿಗಳೇ ಕಾರ್ಯಕ್ರಮಗಳನ್ನು ರದ್ದು ಮಾಡುತ್ತಿರುವಾಗ ಸಂದರ್ಭದಲ್ಲಿ, ಈ ಕಾರ್ಯಕ್ರಮಕ್ಕೆ ತಾವು ಅನುಮತಿ ಕೊಟ್ಟಂಥದ್ದು ಮಾನವೀಯತೆ ದೃಷ್ಟಿಯಿಂದ ಸರಿಯೇ ಎಂಬ ಈ ಎಲ್ಲಾ ಪ್ರಶ್ನೆಗಳು ನಮ್ಮ ಮುಂದಿವೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ನೀವು ಸಾಕಷ್ಟು ಗಾಂಧಿ ವಿಚಾರವನ್ನು ತಿಳಿದುಕೊಂಡವರು ಮತ್ತು ಕಾಂಗ್ರೆಸ್‌ನಲ್ಲಿ ಬಂದಿರತಕ್ಕಂಥವರಾಗಿದ್ದೀರಿ. ಮಹಾತ್ಮ ಗಾಂಧಿಜಿಯವರು ಏನು ಹೇಳಿದ್ದರೆಂದರೆ, ಸ್ವಾತಂತ್ರ್ಯ ಬಂದ ತಕ್ಷಣ ನಾನು ಮಾಡುವ ಮೊದಲನೇ ಕೆಲಸ ಏನೆಂದರೆ, ಹೊರದೇಶದಿಂದ ಮತಾಂತರಕ್ಕೆ ಬಂದಿರತಕ್ಕಂಥ ಮೆಷನರೀಸ್‌ನ್ನು ಮೊದಲು ಹೊರ ಅಟ್ಟುತ್ತೇನೆ ಎಂಬ ಮಾತನ್ನು ಹೇಳಿದ್ದರು. ಆದರೆ, ಈಗಿನ ದುರ್ದೈವ ಏನೆಂದರೆ, ಈ ದೇಶವನ್ನೇ ಒಂದು ರೀತಿ ಕ್ರಿಶ್ಚಿಯನ್‌ಮಯ ಮಾಡುವಂಥ ಒಂದು ವ್ಯವಸ್ಥಿತವಾದಂಥ ತಂತ್ರ, ಷಡ್ಯಂತ್ರ ನಡೆಯುತ್ತಿದೆ ಎನ್ನತಕ್ಕಂಥದ್ದನ್ನು ಇವತ್ತಿನದಿವಸ ಸಾಮಾನ್ಯ ಜನರು ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುವುದೇನೆಂದರೆ, ಬಲತ್ಕಾರದ ಮತಾಂತರ ವ್ಯಭಿಚಾರಕ್ಕಿಂತ ಕಡೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದೆವು. ಮತ್ತು ರಾಜಕೀಯವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿತು, ಆದರೆ, ಇವತ್ತು...

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ನಿಲುವಳಿ ಸೂಚನೆ ಬಗ್ಗೆ..

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾನ್ಯ ಅಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾತನಾಡುತ್ತಿದ್ದೇನೆ. ದಯಮಾಡಿ ನನಗೆ ಅವಕಾಶ ಕೊಡಿ.

ಗೊಂದಲ

ಶ್ರೀ ಸಿ.ಟಿ. ರವಿ : ನೆನ್ನೆಯಿಂದಲೇ ಈ ವಿಚಾರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಆಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಈ ವಿಚಾರವನ್ನು ಮಾತನಾಡುವುದಕ್ಕೆ ದಯಮಾಡಿ ಅವಕಾಶ ಕೊಡಬೇಕು.

ಗೊಂದಲ

ಶ್ರೀ ವಿ. ಸುನೀಲ್‌ಕುಮಾರ್ : ಈ ವಿಷಯದ ಬಗ್ಗೆ ಚರ್ಚೆಯಾಗಬೇಕೆಂದು ನೆನ್ನೆದಿವಸವೇ ತೀರ್ಮಾನವಾಗಿದೆ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ದಯಮಾಡಿ ಅವಕಾಶ ಕಲ್ಪಿಸಿಕೊಡಬೇಕು.

ಗೊಂದಲ

ಅಧ್ಯಕ್ಷರು : ಈ ರೀತಿಯಾಗಿ ಎಲ್ಲರೂ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ವಿ. ಸುನಿಲ್ ಕುಮಾರ್ : ಬೆನ್ನಿಹಿನ್ ಬಗ್ಗೆ ಇವತ್ತು ಚರ್ಚೆಯಾಗಲೇಬೇಕು.

ಶ್ರೀ ಸಿ.ಟಿ. ರವಿ : ಪೂರ್ಣ ಸ್ವಾಭಿಮಾನ ಬಿಟ್ಟ ಹಾಗೆ ಮಾಡಬೇಡಿ. ಸ್ವಲ್ಪವಾದರೂ ಸ್ವಾಭಿಮಾನ ಇಟ್ಟುಕೊಳ್ಳಿ.

ಗೊಂದಲ

ಅಧ್ಯಕ್ಷರು : ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಿ. ಸುನಿಲ್ ಕುಮಾರ್ : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ : ನಿಮ್ಮ ಸಂಪೂರ್ಣ ಸಹಕಾರ ನಮಗೆ ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆದಿವಸ ನಮ್ಮ ಸಂಪೂರ್ಣವಾದ ಸಹಕಾರವನ್ನು ತಮಗೆ ಕೊಟ್ಟಿದ್ದೇವೆ.

ಶ್ರೀ ಹೆಚ್.ಕೆ. ಪಾಟೀಲ್ : ಒಂದು ಸೆಕೆಂಡ್ ನಾನು ಹೇಳತಕ್ಕಂಥದ್ದನ್ನು ಕೇಳಿ. ಅನಂತರ ಇದನ್ನು ಕೇಳಿದ ಮೇಲೆ ನಮ್ಮದೇನೂ ತಕರಾರು ಇರುವುದಿಲ್ಲ. ಶಾಂತವಾಗಿ ಚರ್ಚೆ ಮಾಡಲು ನಾವು ಸಿದ್ದರಿದ್ದೇವೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರು ಮೊದಲು ಶಾಂತವಾಗಿರಬೇಕು.

ಅಧ್ಯಕ್ಷರು : ಈ ರೀತಿಯಾಗಿ ಎಲ್ಲಾ ಸದಸ್ಯರು ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೋ ಸಾರ್. ದಯವಿಟ್ಟು ತಾವು ಕ್ಷಮಿಸಬೇಕು. ಪ್ರತಿಪಕ್ಷದವರಾದ ನಾವು ನಿಮಗೆ ಗೌರವ ಕೊಡುತ್ತೇವೆ. ನೀವು ಸೂಕ್ಷ್ಮವಾಗಿ ಸನ್ನೆ ಮಾಡಿದರೆ ಸಾಕು ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ತಾವು ಕುಳಿತುಕೊಂಡಿದ್ದರೂ ನಿಮ್ಮವರೆಲ್ಲರೂ ಎದ್ದು ನಿಂತುಕೊಂಡಿದ್ದರೆ ಏನರ್ಥ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರು ಮಧ್ಯದಲ್ಲಿ ನಿಂತು ಕೊಂಡು ಮಾತನಾಡಿದರೆ ನಾವೇನು ಮಾಡಬೇಕು?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ತಾವು ಅವರಿಗೆ ಅವಕಾಶ ಮಾಡಿಕೊಡುವುದಕ್ಕೆ ತಮಗೆ ಸಂಪೂರ್ಣವಾದ ಅಧಿಕಾರವಿದೆ. ಮತ್ತೆ ಇದು ತಮಗೆ ಬಿಟ್ಟಿರತಕ್ಕಂಥ ವಿಷಯವಾಗಿದೆ. ಸನ್ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ಹಾಗೂ ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರು ಕಳುಹಿಸಿಕೊಟ್ಟಿರತಕ್ಕಂಥ ನೋಟೀಸ್‌ನ್ನು ಯಾವುದೇ ಕಾರಣಕ್ಕೂ ನಿಲುವಳಿ ಸೂಚನೆ ಕೆಳಗೆ ಅವರು ಅರಿಕೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಕಾರಣ ಏನೆಂದರೆ, ಇದನ್ನು ಅವರೇ ಹೇಳಿದ್ದಾರೆ, ನಾವ್ಯಾರೂ ಹೇಳಿಲ್ಲ. ಅಂದರೆ, ಅವರೇ ಹೇಳಿದ

ಪ್ರಕಾರ ದಿನಾಂಕ 21 ರಿಂದ 23, ಜನವರಿ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ಅಮೇರಿಕ ಮೂಲದ ಬೆನ್ನಿಹಿನ್ ಕಾರ್ಯಕ್ರಮಕ್ಕೆ ಚೆನ್ನೈ ಮತ್ತು ಮುಂಬಯಿಯಿಂದ ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಇತರೇ ಸಲಕರಣೆಗಳನ್ನು ತರಲಾಗಿದ್ದು, ಇದಕ್ಕೆ ವಿಶೇಷ ತೆರಿಗೆ ಹಣವನ್ನು ಸಂಘಟಕರು ನೀಡಿರುವುದಿಲ್ಲ. ಹಾಗೂ ಈ ಕಾರ್ಯಕ್ರಮ ಮುಗಿದ ನಂತರವೂ ಕೂಡ ತೆರಿಗೆ ಹಣವನ್ನು ನೀಡಲು ಸಂಘಟಕರು ನಿರಾಕರಿಸಿದ ಕಾರಣ ರಾಜ್ಯದ ತೆರಿಗೆ ಇಲಾಖೆಯವರು ಸುಮಾರು 250 ಲಾರಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರ ಗಮನಕ್ಕೆ ಮತ್ತು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ನಮ್ಮ ನಿಯಮಗಳ ಪ್ರಕಾರ ಯಾವುದೇ ಒಂದು ನಿಲುವಳಿ ಸೂಚನೆ ತರಬೇಕಾದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ನಿಲುವಳಿ ಸೂಚನೆಯಲ್ಲ. ನಿಲುವಳಿಸೂಚನೆ ಮೂಲಕ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತೆಗೆದುಕೊಂಡಿಲ್ಲವೆಂದು ನಾನೇ ಹೇಳುತ್ತಿದ್ದೇನೆ. ಬೇರೆ ರೀತಿಯಲ್ಲಿ ಇದನ್ನು ಸಬ್‌ಮಿಷನ್ ಮಾಡಿ, ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲವೆಂದು ಹೇಳಿದ ಮೇಲೆ ನಾನು ಈಗ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದಕ್ಕೆ ಮಾನ್ಯ ಅಧ್ಯಕ್ಷರ ಅನುಮತಿ ಕೂಡ ತೆಗೆದುಕೊಂಡಿದ್ದೇನೆ. ಈ ವಿಷಯವನ್ನು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡುವುದು ಬೇಡ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಎಂದು ಹೇಳಿದ ಮೇಲೆ ನಾನು ಈಗ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರು ಇದು ನಿಲುವಳಿ ಸೂಚನೆಗೆ ಸಂಬಂಧಪಡುವುದಿಲ್ಲವೆಂದು ಹೇಳಿದರೆ ನನ್ನದೇನೂ ತಕರಾರು ಇಲ್ಲ.

ಅಧ್ಯಕ್ಷರು : ಆಯಿತು. ಈಗ ಸಬ್‌ಮಿಷನ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಲುವಳಿಸೂಚನೆ ಮೇಲೆ ಪ್ರಸ್ತಾಪ ಮಾಡುತ್ತಿಲ್ಲ ಎಂದು ನಾನೇ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ತಾವು ನಮ್ಮ ಮಾತನ್ನು ಮುಂದುವರಿಸಿ.

ಶ್ರೀ. ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ನೆನ್ನೆದಿವಸ ನೀವು ಹೇಳಿದ್ದನ್ನು ನಾವು ಶಾಂತರೀತಿಯಿಂದ ಕೇಳಿದ್ದೇವೆ. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದಕ್ಕೆ ಹೊರಟಿರತಕ್ಕಂಥ ವಿಷಯ ಏನೆಂದರೆ, ಬಲತ್ಕಾರದ ಮತಾಂತರ ಮಾಡುವುದು ವ್ಯಭಿಚಾರಕ್ಕಿಂತ ಕಡೆ ಎಂದು ನನ್ನ ಸ್ಪಷ್ಟವಾದ ನಿಲುವಾಗಿದೆ. ಬಿಟಿಷರ ವಿರುದ್ಧ ರಾಜಕೀಯವಾಗಿ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಟ ಮಾಡಿದ್ದೆವು. ನಮಗೆ ಧಾರ್ಮಿಕವಾಗಿ ಸ್ವಾತಂತ್ರ್ಯ ಸಿಕ್ಕಿದೆ ಎಂದು ನಾವು ಅಂದುಕೊಂಡಿದ್ದೇವೆ. ಆದರೆ, ಧಾರ್ಮಿಕವಾಗಿ ನಮ್ಮ ದೇಶ ಹೊರದೇಶದ ಒತ್ತಾಯದಿಂದ ಮತ್ತು ವ್ಯವಸ್ಥಿತವಾದಂಥ ಒಂದು ಷಡ್ಯಂತ್ರಕ್ಕೆ ಬಲಿಯಾಗುತ್ತಿದೆ ಎನ್ನತಕ್ಕಂಥ ವಾತಾವರಣವನ್ನು ನಾವು ಬೆನ್ನಿಹಿನ್ ಕಾರ್ಯಕ್ರಮದ ಮೂಲಕ ಕಾಣುತ್ತಿದ್ದೇವೆ. ಸ್ವಾತಂತ್ರ್ಯ ಹೋದರೂ ಕೂಡ ಮತ್ತೆ ಹೋರಾಟ ಮಾಡಿ ಸ್ವಾತಂತ್ರ್ಯ ಗಳಿಸಿಕೊಳ್ಳಬಹುದು. ಆದರೆ, ಧಾರ್ಮಿಕವಾಗಿ ನಮ್ಮ ವಿಚಾರವನ್ನು ಕಳೆದುಕೊಂಡರೆ ಶಾಶ್ವತವಾಗಿ ನಮ್ಮ ಸ್ವಾತಂತ್ರ್ಯ ಹರಣವಾಗುತ್ತದೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. 15000 ಜನ ಪೋಲೀಸರ ರಕ್ಷಣೆಯೊಂದಿಗೆ ಸರ್ಕಾರವೇ ಮಾನ್ಯ ಮುಖ್ಯಮಂತ್ರಿಗಳ ಒಂದು ಮೇಲ್ವಿಚಾರಣೆಯ ಮೂಲಕ

ರತ್ನಗಂಬಳಿಯನ್ನು ಹಾಸಿ ಅವನನ್ನು ಬರಮಾಡಿಕೊಂಡು ಮೂರು ದಿವಸದ ವೈಭವದ ಕಾರ್ಯಕ್ರಮದಲ್ಲಿ ನಾವು ಮಾಡಿರುವ ಸಾಧನೆ ಏನು? ಎಷ್ಟು ಜನರು ಗುಣಮುಖರಾದರು? ಇದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಯಿತು? ಇಂತಹ ಸಂದರ್ಭದಲ್ಲಿ ನೀವು ಹೇಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಎನ್ನುವಂಥದ್ದು ಒಂದು. ಅವರ ಪ್ರಾರ್ಥನೆ ಏನು? ನಾನು ಏಸುವನ್ನು ಕೇಳಿಕೊಂಡರೆ ನಾನು ಅನ್ಯ ಜನಗಳನ್ನೆಲ್ಲಾ ಅಂದರೆ ಹಿಂದುಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು. ಭೂಮಿಯ ಕಟ್ಟಕಡೆಯವರೆವಿಗೂ ಇರುವ ಎಲ್ಲಾ ದೇಶಗಳನ್ನು ನಿನಗೆ ಸ್ವಾಸ್ಥವಾಗಿ ಕೊಡುತ್ತೇನೆ. ಕರ್ನಾಟಕಕ್ಕೆ ಬಂದು ಇಡೀ ಈ ಭಾಗದ ನಾಡನ್ನೆಲ್ಲಾ ಕ್ರಿಶ್ಚಿಯನ್‌ಮಯ ಮಾಡಿ ಏಸುವಿನ ಪಾದದಲ್ಲಿ ತರುತ್ತೇನೆಂದು ಹೇಳುವಂಥ ಪ್ರಾರ್ಥನೆಗೆ ನೀವು ಹೋಗಿ ಕುಳಿತು ಆಶೀರ್ವಾದ ಮಾಡಿದರೆ ಸಹಕಾರ ಕೊಟ್ಟರೆ ಇನ್‌ಡೈರೆಕ್ಟಾಗಿ ನೀವು ಮತಾಂತರಕ್ಕೆ ಅವಕಾಶ ಮಾಡಿಕೊಟ್ಟಂತೆ, ಅದು ನನ್ನ ಮೊದಲನೆಯ ಪ್ರಶ್ನೆ. ನೀವು ಏನು ಹೇಳಬಹುದು, ಎಲ್ಲಾ ವಿಧವಾದ ವಿಗ್ರಹಾರಾಧನೆ ವ್ಯಭಿಚಾರ ಮಾಟಮಂತ್ರ ಹುಚ್ಚುಗುತನದ ಆತ್ಮಗಳನ್ನು ಕಟ್ಟುಹಾಕಿ ಜನರು ಏಸುಸ್ವಾಮಿಯನ್ನು ಸ್ವೀಕರಿಸುವುದಕ್ಕಾಗಿ ಪ್ರಾರ್ಥಿಸಿದಿರಿ. ಎಲ್ಲಾ ವಿಧದ ವಿಗ್ರಹಾರಾಧನೆ ಅಂದರೆ ಏನು? ಬಹುಸಂಖ್ಯಾತ ಹಿಂದೂಗಳು ಯಾವ ದೊಡ್ಡ ಪ್ರಮಾಣದಲ್ಲಿ ಸಾಯಿಬಾಬಾಗೆ ಹೋಗುತ್ತಾರೆ, ತಿರುಪತಿಗೆ ಕೋಟ್ಯಾಂತರ ಜನ ಹೋಗುತ್ತಾರೆ, ಇವರ ಭಾವನೆಗೆ ಅಡ್ಡಿ ಮಾಡುವಂಥ ಅವರಿಗೆ ನೋವು ಮಾಡುವಂಥ ಈ ಸಂದರ್ಭ ಅಲ್ಲವೆ? ಮತ್ತೆ ಇದನ್ನು ಅವರು ಏನು ಹೇಳಿದ್ದಾರೆ, ಈ ಕರಪತ್ರಗಳನ್ನು ಚರ್ಚೆಗಳಲ್ಲಿ ಹಂಚುವುದಕ್ಕೋಸ್ಕರ ಇವುಗಳನ್ನು ಉಪಯೋಗ ಮಾಡುತ್ತಿದ್ದೇವೆ. ಕ್ರಿಶ್ಚಿಯನ್ ಸಮುದಾಯದಲ್ಲಿ ಹಂಚುವುದಕ್ಕೋಸ್ಕರ ಇವುಗಳನ್ನು ಉಪಯೋಗ ಮಾಡುತ್ತೇವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರೆಸ್‌ಮೀಟ್‌ನಲ್ಲಿ ಒಪ್ಪಿಕೊಂಡಿರುವಂಥ ಮಾತು, ಆದರೆ ಅದನ್ನು ಇವತ್ತು ಅಲ್ಲಗಳೆಯುತ್ತಾರೆಂಬುದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಬಹಳ ಮುಖ್ಯವಾದಂಥದ್ದು ಈ ರಾಜ್ಯದ ಹಿಂದೂಗಳ ಸಹಿಷ್ಣತೆಯನ್ನು ವಿಶಾಲ ಹೃದಯವನ್ನು ದುರುಪಯೋಗ ಮಾಡಿಕೊಳ್ಳುವಂಥ ಪ್ರಯತ್ನವನ್ನು ಮಾಡಬಹುದಾ? ಅವರು ಏನು ಹೇಳಿದರು, ಆಗ ತಾವೂ ಕೂಡ ಇದ್ದೀರಿ, ಆ ಕಾರ್ಯಕ್ರಮದಲ್ಲಿ, ಎಲ್ಲಾ ಪತ್ರಿಕೆಗಳ ಮುಖ ಪುಟಗಳಲ್ಲಿ ಬಂದಿದೆ. ಅವನು ಏನು ಹೇಳುತ್ತಾನೆ ಏಸುವನ್ನು ಪ್ರಾರ್ಥಿಸಿ ಕೇವಲ ರೋಗ ರುಜಿನಗಳನ್ನು ವಾಸಿಮಾಡುವುದು ಮಾತ್ರವಲ್ಲ, ನಿಮ್ಮನ್ನು ಲಕ್ಷ್ಮಾಧಿಪತಿಯಾಗಿ ಮಾಡುತ್ತೇನೆ. ಈ ಮಾತನ್ನು ಹೇಳಿದ್ದಾನೆ. ಅಂದರೆ ಈ ರಾಜ್ಯದಲ್ಲಿ ಗುಡಿಸಿಲಿನಲ್ಲಿ ವಾಸ ಮಾಡತಕ್ಕಂಥ ಸಾಮಾನ್ಯ ಕಡುಬಡವರು ನಾವು ಅಲ್ಲಿ ಹೋಗಿ ಏಸುವನ್ನು ಪ್ರಾರ್ಥನೆ ಮಾಡಿದರೆ ಬೆನ್ನಿಹಿನ್ ಕೈಯಿಂದ ಮುಟ್ಟಿಸಿಕೊಂಡರೆ ಅಥವಾ ಆ ಕಾರ್ಯಕ್ರಮದಲ್ಲಿ ಹೋಗಿ ಕೃತಾರ್ಥರಾದರೆ ನಾವು ಲಕ್ಷ್ಮಾಧಿಪತಿಗಳು ಆಗುತ್ತೇವೆ. ನಮ್ಮ ರೋಗರುಜಿನಗಳು ಹೋಗುತ್ತವೆ, ಈ ಭಾವನೆಯಿಂದ ಒಂದು ರೀತಿಯ ಮತಾಂತರಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಂತೆ ಆಗಲಿಲ್ಲವೆ? ಇವತ್ತು ನೀವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಹೇಳಿ ಸ್ವಾಮಿ. ಇವತ್ತು ತಾವೇ ಹೇಳಿ, ಅಂಕಿ ಅಂಶಗಳನ್ನು ತರಿಸಿಕೊಳ್ಳಿ, ಎಷ್ಟು ಜನ ಭಾರತೀಯರು ಅಥವಾ ಕರ್ನಾಟಕದವರು ಅಲ್ಲಿ ಬಂದಂಥವರಿಗೆ ಬೆನ್ನಿಹಿನ್ ಮುಟ್ಟಿರುವುದರಿಂದ ಆರೋಗ್ಯ ಸುಧಾರಣೆಯಾಗಿದೆ. ನಮ್ಮ ನರಸಿಂಹಯ್ಯನವರು ಆರೋಗ್ಯ ಬಹಳ ಕೆಟ್ಟು ಕುಳಿತಿದ್ದಾರೆ, ಅವರನ್ನು ಕರೆದುಕೊಂಡು ಬಂದು ಬೆನ್ನಿಹಿನ್‌ನ ಆಶೀರ್ವಾದ ಮಾಡಿಸಿ ಅವರನ್ನು ಉಳಿಸಿದ್ದರೆ ನಾನು ರಾಜ್ಯದ ಜನರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೆನು. ಆ ಕಾರ್ಯಕ್ರಮದಲ್ಲಿ ಟಾಪ್ ಪೋಲೀಸ್ ಆಫೀಸರ್ಸ್, ಕ್ಯಾಬಿನೆಟ್ ಸಚಿವರು ಕುಳಿತುಕೊಂಡು ಈ

ರೀತಿಯ ಪ್ರಾರ್ಥನೆಗೆ ಅವಕಾಶವನ್ನು ನೀವು ಮಾಡಿಕೊಟ್ಟರೆ ಇನ್‌ಡೈರೆಕ್ಟ್ ಆಗಿ ಈ ಮತಾಂತರಕ್ಕೆ ಬಡವರು ಆಕರ್ಷಿತರಾಗುವುದಕ್ಕೆ ನೀವೇ ಅವಕಾಶ ಮಾಡಿಕೊಟ್ಟಂತಾಗಲಿಲ್ಲವೆ? ಇವತ್ತು ನೀವು ಒಂದು ರೀತಿಯಲ್ಲಿ ರಹದಾರಿಯನ್ನು ತೋರಿಸಿದ ಪರಿಣಾಮ ಇಂದು ಕರ್ನಾಟಕ, ಮುಂದೆ ಆಂಧ್ರಪ್ರದೇಶಕ್ಕೆ ಹೋಗುವ ಪ್ರಯತ್ನ ನಡೆದಿದೆ. ನಾನು ಹೇಳುತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿ ಕೊಡುತ್ತೇನೆ. 16ನೇ ಜನವರಿ 2005 ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ, ಅನೇಕ ಲೇಖನಗಳು ಬಂದಿದೆ, ಸಿಡಿಗಳು ಇದ್ದಾವೆ. ಸಿಜೆ ಎಸ್ ಚಾರ್ಜ್, ಸುಳ್ಳು ಬೊಗಳೆ ದೈವನಿಂದನೆ ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಅವನು ಇಲ್ಲಿ ಏನು ಹೇಳಿದ್ದಾನೆ, ಈ ಪಾಪಾಡ ಪುರುಷ ಧಾರ್ಮಿಕ ವಲಯದಲ್ಲಿ ಅತಿ ಸಂಶಯಾಸ್ಪದ ವ್ಯಾಪಾರಿಯಾಗಿ ಕುಖ್ಯಾತ, ಈತನ ಬಗ್ಗೆ ಭಾರತೀಯ ಅನುಯಾಯಿಗಳಿಗೆ ಗೊತ್ತಿಲ್ಲ. ಈತನ ಬಗ್ಗೆ ಸಾವಿರಾರು ಪುಟಗಳ ಸಾಹಿತ್ಯ ಇದೆ. 'The confusing world of Benny Hinn' ಪುಸ್ತಕದಿಂದ ಹಿಡಿದು, 'The Men Faces of Benny Hinn' ಎಂದು ವಿಡಿಯೊಗಳವರೆಗೆ ಸಾಹಿತ್ಯ ಭಂಡಾರವಿದೆ ಎಂದು ಅವರು ಲೇಖನಗಳನ್ನು ಬರೆದಿದ್ದಾರೆ. ಅವರು ಒಂದು ಕಡೆ ಹೇಳಿದ್ದಾರೆ, ದೇವರು ಹೆಂಗಸರನ್ನು ಸೃಷ್ಟಿಸಿರುವುದೇ ಮಕ್ಕಳನ್ನು ಹೆರುವುದಕ್ಕೆ. ಅಲ್ಲಿ ಈ ಮಾತಿಗೆ ಆಕ್ಷೇಪ ಬಂದಾಗ ಅದನ್ನು ಹೇಳಲೇ ಇಲ್ಲವೆಂದು ಹೇಳಿ, ಕೋರ್ಟಿನಲ್ಲಿ ಕೇಸ್ ಈಗ ನಡೆಯುತ್ತಿದೆ. ನಿಮಗೆ ನಾನು ದಾಖಲೆಗಳನ್ನು ಕೊಡುತ್ತೇನೆ. ಈಗ ನಮ್ಮ ಭಾರತೀಯನೊಬ್ಬ ಪ್ರಕಾಶ್ ಎನ್ನುವ ಒಂದು ಕುಟುಂಬ ಈ ಕಾರ್ಯಕ್ರಮಕ್ಕೆ ಹೋದರು. ಅವನಿಗೆ ಬ್ರೇನ್ ಟ್ಯೂಮರ್ ಇತ್ತು, ಜನರು ಅವರನ್ನು ನಂಬಿಸಿದರು. ಮಾನ್ಯ ಹೆಚ್.ಕೆ. ಪಾಟೀಲರೇ ತಮಗೆ ಆಶ್ಚರ್ಯವಾಗಬಹುದು, ನಾನು ನಿಮಗೆ ವಿವರವನ್ನು ಕೊಡುತ್ತೇನೆ. ಬ್ರೇನ್ ಟ್ಯೂಮರ್ ಹೋಗುತ್ತದೆ ಎಂದು ಹೇಳಿದರು ಎನ್ನುವ ಕಾರಣಕ್ಕೋಸ್ಕರ ಅವನು ಕ್ರಿಶ್ಚಿಯನ್‌ಗೆ ಕನ್ವರ್ಟ್ ಆದ, ಕಾರ್ಯಕ್ರಮದಲ್ಲಿ ಭಾಗವಹಿಸಿದನು. ಎರಡು ಸಾವಿರ ಡಾಲರ್ ಚಕ್‌ನ್ನು ಕೊಟ್ಟ, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆನ್ನುಮುಟ್ಟಿಸಿಕೊಂಡು ಆಶೀರ್ವಾದ ಪಡೆದ ಏಳು ವಾರದಲ್ಲಿ ಅವನು ತೀರಿಕೊಂಡನು. ಲೇಖನ ಇದೆ, ವಿವರ ಇದೆ, ದಾಖಲೆ ಇದೆ. ಮೊನ್ನೆ ಇದೇ ಕಾರ್ಯಕ್ರಮದಲ್ಲಿ 52 ವರ್ಷದ ಒಬ್ಬ ವ್ಯಕ್ತಿ ಆರೋಗ್ಯ ಸರಿಯಿಲ್ಲದವನು ಈ ಕಾರ್ಯಕ್ರಮಕ್ಕೆ ಬಂದಾಗ ಬೆನ್ನಿಹಿನ್ ಆಶೀರ್ವಾದ ಮಾಡಿದ ಮೇಲೆ ಅಲ್ಲಿಯೇ ತೀರಿಕೊಂಡನು. ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ ಆ ಕೇಸ್ ರಿಜಿಸ್ಟರ್ ಆಗಿದೆಯಾ? ಅವನ ಮೇಲೆ ಕ್ರಮ ತೆಗೆದುಕೊಳ್ಳುವಂಥ ಪ್ರಯತ್ನ ಏನು ಮಾಡಿದ್ದೀರಾ? ಅಲ್ಲಿ ಸಾವಿರಾರು ಜನ ಕೈ ಮತ್ತು ಕಾಲು, ಕಣ್ಣು ಇಲ್ಲದವರು ಬಂದಿದ್ದರು, ಅವರು ಯಾರೊಬ್ಬರೂ ಅವನ ಹತ್ತಿರಕ್ಕೆ ಹೋಗುವುದಕ್ಕಾಗಲಿಲ್ಲ. ಅಂದರೆ ವ್ಯವಸ್ಥಿತವಾಗಿ ಟ್ರೈನ್‌ಅಪ್ ಮಾಡಿದಂಥ ಕೆಲವರು ಆರೋಗ್ಯ ಸರಿಯಿಲ್ಲವೆಂದು ಬಂದು ಅವರು ಏಸುವಿನ ಪ್ರಾರ್ಥನೆಯನ್ನು ಮಾಡಿದ ಮೇಲೆ ಕೈ ಮತ್ತು ಕಾಲು ಬಂತು ಎಂದು ಕುಣಿದು ಕುಪ್ಪಳಿಸಿದ ದೃಶ್ಯವನ್ನು ನೋಡಿದ್ದನ್ನು ಬಿಟ್ಟರೆ ಇನ್ನಾವ ರೀತಿಯಲ್ಲಿ ಅಲ್ಲಿ ಗುಣಮುಖರಾದರು ಎಂದು ಸರ್ಕಾರ ಏನಾದರೂ ವರದಿಯನ್ನು ತರಿಸಿಕೊಂಡಿದೆಯಾ? ಅದರ ಬಗ್ಗೆ ತಮ್ಮಲ್ಲಿ ಮಾಹಿತಿ ಏನಾದರೂ ಇದೆಯಾ? ಈ ರೀತಿಯಾಗಿ ಸ್ಪಷ್ಟವಾಗಿ ಮೋಸ ಮಾಡುವಂಥ ಒಂದು ಕೆಲಸ ಅವರು ಇವತ್ತು ಮಾಡಿದ್ದಾರೆ. ಒಂದು ರೀತಿ ನಾವು ನೀವೆಲ್ಲಾ ಸೇರಿ ಈ ವಿದೇಶಿ ಪಾದ್ರಿಯನ್ನು ಈ ಕಾರ್ಯಕ್ರಮಕದಕೆ ಅವಕಾಶ ಮಾಡಿಕೊಟ್ಟು ಇಲ್ಲಿ ಮತಾಂತರಕ್ಕೆ ಹಿಂದುಗಳ ಭಾವನೆಯನ್ನು ಕೆರಳಿಸುವುದಕ್ಕೆ ರಾಜ್ಯಸರ್ಕಾರ

ಇದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಸರಿಯೆ? ಮತ್ತೆ ಬಿನ್ನಿಹಿನ್‌ನ ಈ ಒಂದು ವೈಯಕ್ತಿಕ ಈ ಕಾರ್ಯಕ್ರಮಕ್ಕೆ ಬಂದೋಬಸ್ತಿಗೆ ಸರ್ಕಾರದಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಿದ್ದೀರಿ ಅದನ್ನು ಕೊಡುವವರು ಯಾರು? ಸಾಮಾನ್ಯ ಜನರು ಕೊಡುವಂಥ ತೆರಿಗೆ ಹಣವನ್ನು ಉಪಯೋಗ ಮಾಡಿಕೊಂಡು ಈ ಕೆಲಸವನ್ನು ಮಾಡಿರುತ್ತೀರಿ, ಇದನ್ನು ಸಹಿಸಬೇಕೆ? ಇದನ್ನು ಸರ್ಕಾರ ಯಾವರೀತಿಯಾಗಿ ಭರಿಸುತ್ತದೆ? ಬೆನ್ನಿಹಿನ್‌ನಿಂದ ತಾವು ಏನು ವಸೂಲು ಮಾಡಿದ್ದೀರಾ? ಅದರ ಮಾಹಿತಿಗಳನ್ನು ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಕೊಡಿ. ಜಕ್ಕೂರು ವಿಮಾನ ನಿಲ್ದಾಣವನ್ನು ವಿದೇಶಿ ಒಬ್ಬ ಮತಾಂತರದವನಿಗೆ ಕೊಡುವುದಾದರೆ ಇದಕ್ಕೆ ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದಿಂದ ಅನುಮತಿಯನ್ನು ತಾವು ಪಡೆದಿದ್ದೀರಾ? ನೀವು ಹೇಗೆ ಅನುಮತಿಯನ್ನು ಕೊಟ್ಟಿರಿ? ವಿದೇಶಿ ಪಾದ್ರಿ ಬೆನ್ನಿಹಿನ್ ಜೊತೆ ಯಾರ್ಯಾರು ವಿದೇಶಿ ಜನ ಇಲ್ಲಿಗೆ ಬಂದಿದ್ದರು. ಗುಪ್ತದಳದಿಂದ ಯಾರ್ಯಾರು ಬಂದಿದ್ದರು? ಒಂದು ರೀತಿಯಿಂದ ಜಗತ್ತೇ ಹೇಳುತ್ತಿರುವಂಥದ್ದು ಅಮೆರಿಕ ಅಧ್ಯಕ್ಷ ಮತ್ತೆ ಬಿನ್ನಿಹಿನ್ ಬೆನ್ನುತಟ್ಟಿ ಅವರಿಬ್ಬರೂ ಜೋಡಿ ಒಂದೇ ಎಂದು ಹೇಳುತ್ತಾರೆ. ಅವರ ಆಶೀರ್ವಾದದಿಂದ ಇಲ್ಲಿಗೆ ಬಂದಿದ್ದಾನೆಂದು ಹೇಳುತ್ತಾರೆ. ಅಂದರೆ ಮತಾಂತರ ಬಿಟ್ಟು ಬೇರೆ ಕಾರಣಕ್ಕೆ ಆಗುವುದಿಲ್ಲ. ಈ ರೀತಿಯ ಒಂದು ತಂತ್ರಕ್ಕೆ ನಾವು ಬಲಿಯಾಗಬೇಕೆ? ಬಹಳ ಮುಖ್ಯವಾದಂಥದ್ದು ಹಿರಿಯರಾದ ಶ್ರೀ ರಮೇಶ್ ಕುಮಾರ್‌ರವರು, ಹಾಗೂ ಶ್ರೀ ಹೆಚ್.ಕೆ. ಪಾಟೀಲ್‌ರವರಿದ್ದಾರೆ, ಬೆನ್ನಿಹಿನ್ ಪತ್ನಿ ಸೂಸನ್‌ವರು ಬಹಳ ಸ್ಪಷ್ಟವಾಗಿ ಹೇಳಿರುವಂಥದ್ದು ಅಲ್ಲಿಯ ಸಾರ್ವಜನಿಕ ಸಭೆಯಲ್ಲಿ ಹೇಳಿರುವಂಥದ್ದು ರೆಕಾರ್ಡ್ ಇದೆ, ನಾನು ಶ್ರೀಮತಿ ಸೋನಿಯಾಗಾಂಧಿಯವರನ್ನು ದೂರುವುದಿಲ್ಲ. ಸೋನಿಯಾಗಾಂಧಿ ನನಗೆ ಚೆನ್ನಾಗಿ ಗೊತ್ತು ಸಂತೋಷದಿಂದ ಅವರು ಲಕ್ಷಾಂತರ ಜನರ ಎದುರುಗಡೆ ಪರಿಚಯವನ್ನು ಮಾಡಿಕೊಟ್ಟರು. ಅದಕ್ಕಿಂತ ಬಹಳ ನೋವನ್ನು ತರುವಂಥದ್ದು ನಾನು ತನಿಖೆ ಮಾಡಬೇಕಾಗಿರುವಂಥದ್ದು ಉನ್ನತ ಪೊಲೀಸ್ ಅಧಿಕಾರಿಗಳಿಂದ ಬೆನ್ನಿಹಿನ್ ಸಾರ್ವಜನಿಕ ಸಭೆಯಲ್ಲಿ ಹೇಳಿರುವಂಥ ಮಾತು, ಬೆನ್ನಿಹಿನ್ ಹೆಂಡತಿ ಸೂಸನ್‌ರವರ ಗೆಳತಿ ಗ್ರೇಸ್ ಪಿಂಟೊ ಇವರು ಸಭಿಕರಿಗೆ ಪರಿಚಯವನ್ನು ಮಾಡಿಕೊಟ್ಟು ಸರ್ಕಾರದಲ್ಲಿ ಬಹಳ ಇನ್‌ಫ್ಲೂಯೆನ್ಸ್ ಇರುವಂಥ ವ್ಯಕ್ತಿ ಈ ಗ್ರೇಸ್ ಪಿಂಟೊ ಎಂದು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯವನ್ನು ಮಾಡುವಂಥದ್ದು, ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದಲ್ಲಿ ಮಹತ್ವದ ಇನ್‌ಫ್ಲುಯೆನ್ಸ್ ಇಟ್ಟುಕೊಂಡಿರುವಂಥ ಈ ಗ್ರೇಸ್ ಪಿಂಟೊ ಯಾರು? ಇವರ ಹಿನ್ನಲೆ ಏನು? ಎಷ್ಟು ವರ್ಷದಿಂದ ಭಾರತದಲ್ಲಿದ್ದಾರೆ? ಕೇಂದ್ರ ಸರ್ಕಾರದಲ್ಲಿ ಅಧಿಕಾರ ನಡೆಸುವಂಥವರಿಗೆ ಮತ್ತು ಇವರಿಗೆ ಏನು ಸಂಬಂಧ, ಈ ಮಾತನ್ನು ಬೆನ್ನಿಹಿನ್‌ನೇ ಹೇಳಿರುವುದರಿಂದ ಇದರ ಪೂರ್ವಾಪರ ವಿಚಾರವನ್ನು ಮಾಡದಿದ್ದರೆ ಎಲ್ಲೋ ಒಂದು ಕಡೆ ಕೇಂದ್ರ ಸರ್ಕಾರದಲ್ಲಿ ಈ ರೀತಿಯ ಹೊರದೇಶದ ಏಜೆಂಟ್‌ಗಳು ಒಳನುಗ್ಗಿ ನಮ್ಮ ವ್ಯವಸ್ಥೆಯನ್ನು ಬುಡಮೇಲು ಮಾಡುವಂಥ ಒಂದು ಷಡ್ಯಂತ್ರ ಇಲ್ಲಿ ನಡೆಯುತ್ತಿದೆ ಎನ್ನುವ ಒಂದು ಅನುಮಾನ ನಿಜವಾಗಿ ಇಲ್ಲಿ ಬರುತ್ತಿದೆ, ಅವನೇ ಪರಿಚಯವನ್ನು ಮಾಡಿಕೊಟ್ಟಿದ್ದಾನೆ. ಈ ಗ್ರೇಸ್ ಪಿಂಟೊ ಯಾರು ಎನ್ನುವ ಬಗ್ಗೆ ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಸರ್ಕಾರಕ್ಕೆ ಮಾಹಿತಿ ಇರಲೇಬೇಕು. ಆ ವಿವರನ್ನು ಕೊಡಬೇಕು ಎನ್ನುವ ಒಂದು ಒತ್ತಾಯವನ್ನು ನಾನು ಮಾಡುತ್ತೇನೆ. ಬಹಳ ಮುಖ್ಯವಾಗಿ ಇರುವಂಥದ್ದು, ಆ ಕಡೆ ಈ ಕಡೆ ಇರುವಂಥ ಶಾಸಕರು ನಾವು ಬೇಧಭಾವವನು.

ಇಟ್ಟುಕೊಳ್ಳುವ ಅಗತ್ಯವಿಲ್ಲ. ನಿಮ್ಮ ಸಮಕ್ಷಮ ಕರ್ನಾಟಕದಲ್ಲಿ ಕ್ರೈಸ್ತಧರ್ಮ ಪ್ರಚಾರಕ್ಕೆ ಮೀಸಲಾಗಿರುವ ಖಾಸಗೀ ಸಿಡಿ ಅಂಡ್ ಟಿವಿ ಚ್ಯಾನಲ್ ಪ್ರಾರಂಭ ಮಾಡುವ ಒಂದು ನಿರ್ಧಾರವನ್ನು ಅವರು ಪ್ರಕಟ ಮಾಡಿದ್ದಾರೆ. ಅಂದರೆ ಇದು ಸರಿಯೆ? ಬಹುಸಂಖ್ಯಾತ ಹಿಂದೂಗಳು ವಾಸ ಮಾಡುವಂಥ ಅನೇಕ ಮತದ ಜನಾಂಗ ವಾಸ ಮಾಡುವ ಈ ಸ್ಥಳಕ್ಕೆ ಬಂದು ತಮ್ಮ ಒಂದು ಕೋಮಿಗೆ ಸಂಬಂಧಪಟ್ಟಂಥ ಪ್ರಚಾರಕ್ಕಾಗಿ ಒಂದು ಟಿವಿ ಚಾನಲ್‌ನ್ನು ನಾನೇ ಪ್ರಾರಂಭ ಮಾಡುತ್ತೇನೆಂದು ನಿಮ್ಮ ಎದುರುಗಡೆ ಒಂದು ರಹದಾರಿಯನ್ನು ಪರ್ಮಿಷನ್ ತೆಗೆದುಕೊಳ್ಳುತ್ತಾನೆಂದರೆ ಇದನ್ನು ಸಹಿಸಿಕೊಳ್ಳುವುದು ಹೇಗೆ? ಇದನ್ನು ನಾವು ಹೇಗೆ ಒಪ್ಪಿಕೊಳ್ಳಬೇಕು? ನನ್ನ ಮಾತು ಬೇಡ ಸ್ವಾಮಿ, ನಿಮ್ಮ ಹೈಯರ್ ಎಜುಕೇಷನ್ ಮಿನಿಸ್ಟರ್ ಶ್ರೀ ಮಂಜೂನಾಥ್‌ರವರು ಯಾವುದೇ ಕಾರಣಕ್ಕೆ ಬೆನ್ನಿಹಿನ್ ಕಾರ್ಯಕ್ರಮ ನಡೆಯಕೂಡದು, ಮುಖ್ಯಮಂತ್ರಿಗಳು ಹೋಗಬಾರದು, ಪರ್ಮಿಶನ್ ಕೊಟ್ಟಿರುವುದನ್ನು ರದ್ದು ಮಾಡಬೇಕೆಂದು ಹೇಳಿದ್ದಾರೆ. ಹಿರಿಯ ನಾಯಕರಾದಂತಹ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಬಹಳ ಸ್ಪಷ್ಟವಾಗಿ ಮುಖ್ಯಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಕಿವಿಮಾತನ್ನು ಹೇಳಿದ್ದಾರೆ. ಯಾವುದೇ ಕಾರಣಕ್ಕಾಗಿ ಇದಕ್ಕಾಗಿ ಅನುಮತಿಯನ್ನು ಕೊಡಬಾರದು, ಮುಖ್ಯಮಂತ್ರಿಗಳು ಹೋಗಬಾರದು ಎಂದು ಹೇಳಿದ್ದಾರೆ. ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಶ್ರೀ ಯು.ಆರ್. ಅನಂತಮೂರ್ತಿಯವರು ಈ ಮಾತನ್ನು ಹೇಳಿದ್ದಾರೆ. ತಾವು ಏತಕ್ಕಾಗಿ ಮಾತನಾಡುತ್ತಿದ್ದೀರಿ, ನಾನು ಯೀಲ್ಡ್ ಆಗಿಲ್ಲ. ನಾನು ಪೂರ್ಣವಾಗಿ ಮಾತನಾಡುವವರೆಗೂ ಕೂಡ ಯೀಲ್ಡ್ ಆಗುವುದಿಲ್ಲ. ನಾನು ಯೀಲ್ಡ್ ಆಗಿಲ್ಲ.

ಗೊಂದಲ

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ, ತಾವು ಕುಳಿತುಕೊಳ್ಳಿ. ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಳ ಮುಖ್ಯವಾಗಿ ರಾಜ್ಯದ ಮುಖ್ಯಮಂತ್ರಿಗಳೇ,...

ಶ್ರೀ ಆಲ್ಕೋಡ ಹನುಮಂತಪ್ಪ : ವಿರೋಧಪಕ್ಷದ ನಾಯಕರು ಮಾತನಾಡಿದ ಮೇಲೆ ನಮಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಯೀಲ್ಡ್ ಆಗಿಲ್ಲ, ನಮಗೆ ನಿಮ್ಮ ಸಹಾಯ ಬೇಡ.

ಶ್ರೀ ಆಲ್ಕೋಡ್ ಹನುಮಂತಪ್ಪ : ಆಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಸಾರ್ ಪ್ಲೀಸ್ ಅವರಿಗೆ ಹೇಳಿ ಸಾರ್.

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಲ್ಡ್ ಆಗಿಲ್ಲ. ನಾನು ಈಲ್ಡ್ ಆಗದೆ ಅವರು ಮಾತನಾಡಿದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ಅವರಿಗೆ ಅವಕಾಶ ಕೊಟ್ಟ ಮೇಲೆ ಅವರು ಮಾತನಾಡಲಿ. ಅವರ ಪರವಾಗಿ ಇವರು ವಕಾಲತ್ತು ವಹಿಸುವುದಕ್ಕೆ ಇವರು ಯಾರೂ ಸಾರ್? ಮಾನ್ಯ ಮಂಜುನಾಥ್‌ರವರು ಈ ಮನೆಯ ಹಿರಿಯ ಸದಸ್ಯರಾಗಿದ್ದಾರೆ. ಅವರು ಬಂದು ಇಲ್ಲಿ ಹೇಳಲಿ.

ಗೊಂದಲ

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ,

ಗೊಂದಲ

ಅಧ್ಯಕ್ಷರು : ಹನುಮಂತಪ್ಪನವರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ ಬಿಡಿ. ನಂತರ ತಾವು ಮಾತನಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದೇ ಒಂದು ಮಾತು ಮುಖ್ಯ ಮಂತ್ರಿಗಳಿಗೆ ಹೇಳುವುದಾದರೆ, ತಾವು ಅನುಭವಿಗಳಿದ್ದೀರಿ, ಬುದ್ದಿವಂತರಾಗಿದ್ದೀರಿ; ತಮ್ಮ ಬಾಯಿಯಲ್ಲಿ ಏನು ಬರುತ್ತಿದೆ. ಈ ಬಿಜೆಪಿಯವರು ಹೊಸ ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಈ ಮಾತನ್ನು ತಾವು ಹೇಳಿದ್ದೀರಿ. ಮತ್ತೆ ಬಿಜೆಪಿಯನ್ನು ಒಂದು ವೆಪನ್ ಆಗಿ ಉಪಯೋಗಿಸುವಂತಹ ಪ್ರಯತ್ನ, ಇವರು ಬೇರೆ ಮತಾಂತರದ ಮತಗಳ ವಿರುದ್ಧ ಇರುವಂತಹ ಜನ, ಈ ರೀತಿಯಾಗಿ ಭಾವನೆಯನ್ನು ಕೆರಳಿಸುವಂತಹ ಪ್ರಯತ್ನ ಮಾಡಿದ್ದೀರಿ. ನಾನು ನಿಮ್ಮನ್ನು ಕೇಳುತ್ತೇನೆ. ನೀವು ನಮ್ಮ ಮಾತನ್ನು ಕೇಳಬೇಡಿ. ಸಂಘ, ಸಂಘಪರಿವಾರ ಬಿಜೆಪಿ ಮಾತನ್ನು ಕೇಳಬೇಡಿ. ಹಾರ್ನಳ್ಳಿ ರಾಮಸ್ವಾಮಿಯವರು ಸಂಘದವರಲ್ಲ. ನಮ್ಮ ಮುಖಂಡರಾದಂತಹ ನಿಮ್ಮ ಕ್ಯಾಬಿನೆಟ್ ಕೊಲೀಗ್ ಆದಂತಹ ಮಂಜುನಾಥ್‌ರವರು ನಮ್ಮವರು ಏನೂ ಅಲ್ಲ. ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಯು.ಆರ್. ಅನಂತಮೂರ್ತಿಯವರು ನಮ್ಮವರು ಅಲ್ಲ. ನೂರಾರು ಜನ ಬಹಳ ಸ್ಪಷ್ಟವಾಗಿ ಈ ಕೆಲಸವನ್ನು ತಾವು ಮಾಡಬಾರದು ಎಂದು ಹೇಳಿ ವಿನಂತಿಯನ್ನು ಮಾಡಿದ ಮೇಲೂ ಸಹ ತಾವು ಈ ಕಾರ್ಯಕ್ರಮಕ್ಕೆ ಅನುಮತಿಯನ್ನು ಕೊಡುವಂಥದ್ದು, ಇದು ಎಷ್ಟರಮಟ್ಟಿಗೆ ಸರಿ ಎಂಬುದರ ಬಗ್ಗೆ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬಹಳ ಸ್ಪಷ್ಟವಾಗಿ ಡಾ: ಯು.ಆರ್. ಅನಂತ ಮೂರ್ತಿಯವರ ಮಾತನ್ನು ಕೇಳುವುದಾದರೆ, "ಬೆನ್ನಿಹಿನ್ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಹೋಗುತ್ತಾರಂತೆ, ಏನು ಹೇಸಿಗೆ ಇದೆಲ್ಲಾ." ಇದು ಅನಂತಮೂರ್ತಿಯವರು ಹೇಳುವಂತಹ ಮಾತು. ಮತ್ತೆ ಎಲ್ಲಾ ಪ್ರಮುಖರು ಯಾರ್ಯಾರು ನಿಮಗೆ... ಅವರೆಲ್ಲರೂ ಸಹ ಇಷ್ಟೆಲ್ಲಾ ಹೇಳಿದ ಮೇಲೆ....

ಡಾ. ವೈ ನಾಗಪ್ಪ (ಸಮಾಜ ಕಲ್ಯಾಣ ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೆ, ಕೂತದಿಂದ ಆ ಪದವನ್ನು ತೆಗಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕ ಪತ್ರಿಕೆಗಳಲ್ಲಿ ಎಡಿಟೋರಿಯಲ್ ಕಾಲಂನಲ್ಲಿ ಬಂದ ಮೇಲೆ...

ಡಾ. ವೈ. ನಾಗಪ್ಪ : ಮಾನ್ಯ ವಿರೋಧಪಕ್ಷದ ನಾಯಕರು ಅನ್‌ಪಾರ್ಲಿಮೆಂಟರಿ ಶಬ್ದವನ್ನು ಉಪಯೋಗಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನಂತಮೂರ್ತಿಯವರು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ, ಅದರ ಕಟಿಂಗ್ ನಾನು ನಿಮಗೆ ಕಳುಹಿಸಿಕೊಡುತ್ತಿದ್ದೇನೆ.

ಡಾ. ವೈ. ನಾಗಪ್ಪ : ಆ ಮಾತನ್ನು ಪಾಪಸ್ಸು ತೆಗೆದುಕೊಳ್ಳಬೇಕು.

ಗೊಂದಲ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ವಿರೋಧಪಕ್ಷದ ನಾಯಕರು ಈ ಸಭೆಯಲ್ಲಿ ಅಸಮರ್ಪಕವಾದ ಶಬ್ದವನ್ನು ಪ್ರಯೋಗ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ನಾನು ಹೇಳುತ್ತಿಲ್ಲ. ಅದು ಬಂದಿರುವುದನ್ನು ನಿಮಗೆ ಕೊಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಆ ಶಬ್ದವನ್ನು ಕಡತದಿಂದ ತೆಗೆದುಹಾಕಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಪತ್ರಿಕೆಗಳಲ್ಲಿ ಧಾರವಾಹಿಯಾಗಿ ಅವರ ಭಾಷೆಯಲ್ಲಿಯೇ ಹೇಳಿದ್ದಾರೆ.

ಅಧ್ಯಕ್ಷರು : ಸಭಾ ಮರ್ಯಾದೆಗೆ ತಕ್ಕ ಹಾಗೆ ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ನಾನು ಹೇಳಲಿಲ್ಲ. ಅಲ್ಲಿ ಬಂದಿರುವುದರ ಬಗ್ಗೆ ನಾನು ಹೇಳುತ್ತಿರುವುದು. ಪತ್ರಿಕೆಯಲ್ಲಿ ಏನು ಬಂದಿದೆ ಅವರು ಹೇಳಿದ್ದು ಏನಿದೆ, ಅದನ್ನು ಮಾತ್ರ ನಾನು ಹೇಳುತ್ತಿದ್ದೇನೆ. ನಾನು ಏನೂ ಹೇಳುತ್ತಿಲ್ಲ. ಜ್ಞಾನಪೀಠ ಪ್ರಶಸ್ತಿ ಕೊಟ್ಟಂತಹವರು, ಯಡಿಯೂರಪ್ಪನವರ ಮಾತನ್ನು ಕೇಳಬೇಡಿ. ಸಂಘಪರಿವಾರದವರ ಮಾತನ್ನು ಕೇಳಬೇಡಿ. ಸಂಘಪರಿವಾರವನ್ನು ಒಂದು ವೆಪನ್ ಆಗಿ ಉಪಯೋಗ ಮಾಡಿಕೊಳ್ಳಬೇಡಿ. ವಾಸ್ತವಿಕವಾಗಿ ನಿಮ್ಮ ಹಿತೈಷಿಗಳು ಈ ನಾಡಿನ ಹಿತಚಿಂತಕರು ಹೇಳಿದ ಮಾತಿಗೆ ನೀವು ಬೆಲೆ ಕೊಡಲಿಲ್ಲವಲ್ಲ ಎಂದು ಹೇಳಿದೆವೆಯೇ ಹೊರತು ಬೇರೆ ಯಾವುದೇ ಕಾರಣಕ್ಕೂ ಅಲ್ಲ.

ಶ್ರೀ ಅರಗ ಜ್ಞಾನೇಂದ್ರ : ಅದು ಸರಿಯಿಲ್ಲದಿದ್ದರೆ ಯು.ಆರ್. ಅನಂತಮೂರ್ತಿಯವರ ಮೇಲೆ ಕಾನೂನು ರೀತಿಯ ಕ್ರಮವನ್ನು ತೆಗೆದುಕೊಳ್ಳಿ. ಪ್ರಕಟ ಮಾಡಿರುವಂತಹ ಪೇಪರ್ ಮತ್ತು ಅನಂತ ಮೂರ್ತಿಯವರ ಮೇಲೆ ಕಾನೂನು ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳಿ. ಅವರ ಮೇಲೆ ಮೊಕದ್ದಮೆಯನ್ನು ಹೂಡಿ. ಅದು ಆಗುತ್ತದೆಯೇ ನೋಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಯು.ಆರ್. ಅನಂತಮೂರ್ತಿಯವರ ಭಾಷಣವನ್ನು ಅವರು ಓದಿಕೊಂಡು ಹೇಳುತ್ತಿದ್ದಾರೆ. How can you call it unparliamentary? He is only quoting his words. It is not his words.

ಗೊಂದಲ

ಶ್ರೀ ಹೆಚ್.ಕೆ. ಪಾಟೀಲ್ : ಅವರಿಗೆ ಪರವಾನಿಗೆಯನ್ನು ಕೊಟ್ಟಿದ್ದೀರಿ, ಅವರು ಎಷ್ಟು ನಿಮಿಷ ಆ ದರ್ಜೆಯನ್ನು ಮಾಡುತ್ತಾರೆ.

ಅಧ್ಯಕ್ಷರು : ಅವರು ಪ್ರಸ್ತಾವನೆಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾವನೆಯನ್ನು ಮಾಡುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರೇ, ಪ್ರಮುಖವಾದ ವಿಷಯವೆಂದು ಚರ್ಚೆಯನ್ನು ಮಾಡುತ್ತಿದ್ದೀರಿ. ದಯಮಾಡಿ ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಹೇಸಿಗೆ ಎನ್ನುತಕ್ಕ ಪದ ಸಂಸದೀಯ ಪದ. ಅದರಿಂದ ಏನು ಅನುಮಾನ ಪಡಬೇಕಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಯಡಿಯೂರಪ್ಪನವರು ಬಳಸಿರುವಂತಹ ಪದವಲ್ಲ. ಬಹಳ ಹಿರಿಯಸಾಹಿತಿಗಳು ಬಳಸಿರುವಂತಹ ಪದವಾಗಿದೆ. ಪೇಪರನಲ್ಲಿ ಬಳಸಿರುವಂತಹ ಪದ ಬಳಸುವುದು ಅನ್‌ಪಾರ್ಲಿಮೆಂಟರಿ ಹೇಗೆ ಆಗುತ್ತದೆ ಸಾರ್?

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಈ ಪ್ರಸ್ತಾವನೆಯನ್ನು ಶೂನ್ಯವೇಳೆಯಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ನಾನು ತಮಗೆ ಅವಕಾಶವನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಎಷ್ಟು ಸಮಯ ಬೇಕು ಎಂಬುದು ತಮ್ಮ ವಿವೇಚನೆಗೆ ಬಿಟ್ಟಿದ್ದು. ದಯಮಾಡಿ ಬೇಗನೆ ಮುಗಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಯಡಿಯೂರಪ್ಪ ಹೊಸದಾಗಿ ಪ್ರಸ್ತಾಪ ಮಾಡುವಂಥದ್ದು ಏನೂ ಇಲ್ಲ. ದಾಖಲೆಗಳಲ್ಲಿ ಕೆಲವು ಉಳಿಯಬೇಕು ಎನ್ನುವ ದೃಷ್ಟಿಯಲ್ಲಿ ನಾನು ನಾನು ನಿಂತಿದ್ದೇನೆಯೇ ಹೊರತು ಮಾನ್ಯ ಮುಖ್ಯಮಂತ್ರಿಗಳೇ, ಇದರ ಬಗ್ಗೆ ನಾನು ಏನು ಹೇಳಲೇ ಇಲ್ಲ. ಇವತ್ತು ಇಲ್ಲಿ ಹೇಳಿದ್ದೆ ಹೇಳುವಂತಹ ಪ್ರಶ್ನೆಯೇ ಇಲ್ಲ. ಈಗ ನಿಮ್ಮ ಪರಿಸ್ಥಿತಿ ಬೇರೆ ಇದೆ. ನಿಮ್ಮ ಸಮಸ್ಯೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನೀವು ತೊಂದರೆಯಲ್ಲಿ ಸಿಕ್ಕಿಕೊಂಡಿದ್ದೀರಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಾವು ಯಾವ ನಿಯಮಾವಳಿಯಲ್ಲಿ ಅವರಿಗೆ ಅವಕಾಶವನ್ನು ಕೊಡುತ್ತಿದ್ದೀರಿ, ಎಂಬುದು ಗೊತ್ತಿಲ್ಲ, ಅವರು ವಿರೋಧಪಕ್ಷದ ನಾಯಕರಾಗಿದ್ದಾರೆ, ಅವರು ಪ್ರಸ್ತಾಪ ಮಾಡುವಂಥ ಹಕ್ಕು ಇದೆ. ಏನಾಗಿದೆ ಎಂದರೆ ಬೆನ್ನಿಹಿನ್ ಅಮೇರಿಕಾ ಹೋಗಿ ತಲುಪಿ ಆಗಿದೆ. ಬೆನ್ನಿಹಿನ್ ಬಗ್ಗೆ ಕಳೆದ ಹತ್ತು ದಿನಗಳಿಂದ ಹೇಳುತ್ತಿದ್ದೀರಿ. ಹೊಸದಾಗಿ ಏನಾದರೂ ಹೇಳುವುದು ಇದ್ದರೆ ಹೇಳಿ ಅದರ ಬಗ್ಗೆ ನಾವು ಉತ್ತರ ಕೊಡುತ್ತೇವೆ. ಈಗ ಎಲ್ಲರೂ ಕೂಡ ಅದರ ಬಗ್ಗೆ ಮಾತನಾಡಬೇಕಾದರೆ I have no objections, ನೀವು ಯಾವ ನಿಯಮದ ಅಡಿಯಲ್ಲಿ ಅವಕಾಶ ಕೊಡುತ್ತೀರಿ, ಇದರ ಬಗ್ಗೆ ಒಂದು ದಿವಸಗಳ ಕಾಲ ಚರ್ಚೆ ನಡೆಯಲಿ, ಬೇರೆಯವರಿಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೂ ಕೂಡ ನಮ್ಮ ಕಡೆಯವರು ಕೂಡ ಮಾತನಾಡುವವರು ಇದ್ದಾರೆ. ಇದರ ಬಗ್ಗೆ ತಕ್ಕ ಉತ್ತರವನ್ನು ಕೊಡುತ್ತೇವೆ. ತಾವು ವಿರೋಧಪಕ್ಷದ ನಾಯಕರಾಗಿ ಇಂತಹ ವಿಷಯಗಳ ಬಗ್ಗೆ ಕಾಲಹರಣ ಮಾಡಬೇಡಿ. ಸಾಕಷ್ಟು ಜ್ವಲಂತವಾದಂತಹ ಸಮಸ್ಯೆಗಳು ಇವೆ. ನೀವು ಈ ರೀತಿಯಾಗಿ ಮಾಡಿ ಮಾಡಿ ನಿಮಗೆ ಜನಗಳು ಪಾಠವನ್ನು ಕಲಿಸಿದ್ದಾರೆ. ಮತ್ತೆ ಅದೇ ವಿಷಯವನ್ನು ಹೇಳಿಕೊಂಡು ಹೋಗುತ್ತಿದ್ದೀರಿ. ಜನರು ನಿಮಗೆ ಪಾಠವನ್ನು ಕಲಿಸಿದ್ದಾರೆ. 2004ರಲ್ಲಿ ಎಷ್ಟು ಸಾರಿ ಸೋನಿಯಾಗಾಂಧಿಯವರ ಹೆಸರನ್ನು ತೆಗೆದುಕೊಳ್ಳುತ್ತೀರಿ, ಅಷ್ಟೇ ಸಾರಿ ಜನರು ನಿಮಗೆ ಅವಮಾನವನ್ನು ಮಾಡಿದ್ದಾರೆ.

ಸೊಂದಲ

ಶ್ರೀ ಅರಗ ಜ್ಞಾನೇಂದ್ರ : ಕಳೆದ ಸಾಲಿನಲ್ಲಿ ನೀವು ಎಷ್ಟು ಜನರು ಇದ್ದೀರಿ, ಈಗ ಎಷ್ಟು ಜನರು ಇದ್ದೀರಿ.

ಗೊಂದಲ

ಶ್ರೀ ಎಸ್.ಎಸ್. ಪಾಟೀಲ್ : ಕುಡಿಯುವ ನೀರಿನದ್ದು ಏನಾಯಿತು? ಕುಡಿಯುವ ನೀರು ಹೋಗೇ ಬಿಟ್ಟಿತು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಏನೇನು ಆಗಿಲ್ಲ, ಈ ದೇಶದ ಹಾಗೂ ಈ ರಾಜ್ಯದ ಜನ ನಿಮ್ಮ ಎಲ್ಲಾ ಮುಖಂಡರಿಗೆ ಸರಿಯಾದ ರೀತಿಯಲ್ಲಿ ಪಾಠವನ್ನು ಕಲಿಸಿದ್ದಾರೆ. ಸೋನಿಯಾಗಾಂಧಿ, ಸೋನಿಯಾಗಾಂಧಿ ಎಂದು ಏನು ಅರ್ಥವಿಲ್ಲದ ರೀತಿಯಲ್ಲಿ ಮಾತನಾಡುತ್ತೀರಿ. ತಾವು ಮಾತನಾಡಿ ನಮ್ಮ ಬಗ್ಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅಲ್ಲಿ ಹೋಗಿದ್ದೀರಿ, ಏನು ಲೋಪಗಳು ಆಗಿದೆ, ಕರ್ನಾಟಕ ಸರ್ಕಾರ ಎಲ್ಲಿ ತಪ್ಪಿದೆ,

ಶ್ರೀ ಅರಗ ಜ್ಞಾನೇಂದ್ರ : ಇವರು ಬೆನ್ನಿಹಿನ್‌ನನ್ನು ವಿವೇಕಾನಂದರಿಗೆ ಹೋಲಿಸಿದರು. ವಿವೇಕಾನಂದರು ಏನು ಎನ್ನುವುದು ಗೊತ್ತಿದೆಯಾ? ವಿವೇಕಾನಂದರನ್ನು ಯಾವ ಕಾರಣಕ್ಕಾಗಿ ಹೋಲಿಸಿದ್ದೀರಿ?

ಗೊಂದಲ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ನಾನು ನನ್ನ ಉತ್ತರದಲ್ಲಿ ಹೇಳುತ್ತೇನೆ. ನೀವು ಪ್ರಸ್ತಾಪ ಮಾಡಿ ಬಿಟ್ಟು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ಮಾತನ್ನು ಹೇಳಿಬಿಟ್ಟು ಮುಗಿಸಿ ಬಿಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡುವುದು ಮುಗಿದೆ ಹೋಯಿತು. ಅದು ಸಮಸ್ಯೆ ಇದ್ದದ್ದು ಅದು ಮುಂದಕ್ಕೆ ಹೋಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ .....

(ಅತೀವ ಗೊಂದಲ ಎರಡೂ ಕಡೆಯಿಂದ ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾತನಾಡುವಾಗ ಹತ್ತೋಟ ಇರಲಿ. ಏನು ಮಾತನಾಡುತ್ತಿದ್ದೀರಿ ನೀವು? ಅದು ಬಿಡಿ, ನಿಮ್ಮದು ಹೇಳಿ. ಎರೋಧ ಪಕ್ಷದ ನಾಯಕರಾಗಿ ಸ್ವಲ್ಪ ಅರಿತು ಮಾತನಾಡಿ. ಏನು ಮಾತನಾಡುತ್ತೀರಿ ನೀವು?

ಗೊಂಬಲ

ಅಧ್ಯಕ್ಷರು : ಯಾವುದೂ ರೆಕಾರ್ಡಿಗೆ ಹೋಗಬಾರದು. ಯಾರು ಏನು ಮಾತನಾಡಿದರೂ ರೆಕಾರ್ಡ್ ಮಾಡುವ ಹಾಗಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಸಮಗ್ರ ತನಿಖೆಯಾದರೆ ಅನೇಕ ಸತ್ಯ ಸಂಗತಿಗಳು ಈಚೆಗೆ ಬರುತ್ತವೆ. ನಿಮಗೆ ನಿಜವಾಗಿ ಧೈರ್ಯ ಇದ್ದರೆ ಇದನ್ನು ತನಿಖೆಗೆ ಒಳಪಡಿಸಿ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಯಡಿಯೂರಪ್ಪನವರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮದೂ ಅಭಿಪ್ರಾಯ ಇದೆ.

ಅಧ್ಯಕ್ಷರು : ಇಲ್ಲ, ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಅವರಿಗೆ ಯಾವ ನಿಯಮಾವಳಿ ಅಡಿಯಲ್ಲಿ ಅವಕಾಶ ಕೊಟ್ಟಿರಿ? ಆದ್ದರಿಂದ ನಮಗೂ ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ನಾವೂ ಕೂಡ ಮಾತನಾಡಬೇಕು.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ಅವರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು. ಅದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ ಎಂದು ಹೇಳಿದಾಗ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳಿದ್ದಾರೆ. ನಾನು ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ಇಲ್ಲಿಗೆ ಇದು ಮುಕ್ತಾಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ಯಾರಿಗೂ ಅವಕಾಶ ಕೊಡುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ, ಇಲ್ಲ. ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು : ಯಾವುದೇ ಕಾರಣಕ್ಕೆ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಈಗ ಸಭಾನಾಯಕರು ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ನಮಗೂ ಕೂಡ ಅವಕಾಶ ಕೊಡಬೇಕು. ತಾವು ಸಿಟ್ಟುಮಾಡಿಕೊಳ್ಳಬೇಡಿ. ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ನಾನು ಯಾವುದೇ ಕಾರಣಕ್ಕೂ ಸಿಟ್ಟು ಮಾಡಿಕೊಳ್ಳುವ ಪ್ರಶ್ನೆ ಇಲ್ಲ. ಆದರೆ ಈ ವಿಚಾರದಲ್ಲಿ ನಾನು ಯಾವುದೇ ಕಾರಣಕ್ಕೆ ಅವಕಾಶವನ್ನು ಕೊಡುವುದಿಲ್ಲ. ಈಗ ಸಭಾನಾಯಕರು ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಾವೂ ಕೂಡ ವಿರೋಧ ಪಕ್ಷದಲ್ಲಿದ್ದೇವೆ. ಆದ್ದರಿಂದ ನಮಗೂ ಅವಕಾಶವನ್ನು ತಾವು ಕೊಡಬೇಕು.

ಶ್ರೀ ಎಸ್. ರಾಜೇಂದ್ರನ್ : ನಮ್ಮ ಅಭಿಪ್ರಾಯವನ್ನು ಹೇಳುವುದಕ್ಕೂ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ಇಲ್ಲಿ ಕೇಳಿ. ಅವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದರು. ನಾನು ಒಪ್ಪುವುದಕ್ಕೆ ಆಗುವುದಿಲ್ಲವೆಂದು ಹೇಳಿದಾಗ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಕೇಳಿದಾಗ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಅವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆದ್ದರಿಂದ ಇದರಲ್ಲಿ ದಯಮಾಡಿ ಯಾರಿಗೂ ಅವಕಾಶವನ್ನು ಕೊಡುವುದಕ್ಕೆ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಮ್ಮ ವಿಚಾರಗಳು ಬೇರೆ, ನಮ್ಮ ವಿಚಾರಧಾರೆ ಬೇರೆ....

ಶ್ರೀ ಜೆ.ಸಿ. ಮಾಧುಸ್ವಾಮಿ : ವಿರೋಧ ಪಕ್ಷಗಳು ಎಲ್ಲಾ ವಿಷಯಗಳಲ್ಲೂ ಒಂದಾಗಿಲ್ಲ. ಯಡಿಯೂರಪ್ಪನವರು ಹೇಳಿದ್ದೇ ಸರಿಯೇ, ತಪ್ಪೇ ಎನ್ನುವ ಭಾವನೆ ಹೊರಗಡೆ ಹೋಗಬಾರದು. ನಾವು ಬೇರೆಬೇರೆ ಪಕ್ಷಗಳಲ್ಲಿ ಇದ್ದೇವೆ. ಆದ್ದರಿಂದ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ತಾವು ಒಂದು ಅವಕಾಶವನ್ನು ಈ ಇಶ್ಯೂನಲ್ಲಿ ಕೊಡಬೇಕು.

ಗೊಂದಲ

(ಮಾನ್ಯ ಸದಸ್ಯರುಗಳಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಮತ್ತು ಶ್ರೀ ಎಸ್. ರಾಜೇಂದ್ರನ್ ಅವರು ಸಭಾಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ಬಂದು ನಿಂತರು)

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು : ಸಂದರ್ಭೀಯ ವ್ಯವಹಾರಗಳ ಸಚಿವರು ಏನೋ ಹೇಳುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಅನೇಕ ವಿಚಾರಗಳನ್ನು ನಾವು ಹೇಳಬೇಕಾಗಿದೆ. ಮಾನ್ಯ ಯಡಿಯೂರಪ್ಪನವರ ಭಾಷಣ ಬಂದು ಕಡೆ ಆಯಿತು. ನಾವು ಹೇಳತಕ್ಕದ್ದೂ ಕೂಡ ಜನರಿಗೆ ಗೊತ್ತಾಗಬೇಕು. ಆ ದೃಷ್ಟಿಯಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನಾನು ಚರ್ಚೆಗೆ ಅವಕಾಶ ಕೊಟ್ಟಿಲ್ಲ.

(ಗೊಂದಲ ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ತೊಡಗಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಕುಸ್ತಿಗೆ ಕರಿತಿದ್ದೀರೇನ್ರಿ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ನನಗೆ ಸ್ವಾತಂತ್ರ್ಯ ಇದೆ.

ಗೊಂದಲ

ಅಧ್ಯಕ್ಷರು : ಈಗ ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸದಸ್ಯರುಗಳೆಲ್ಲರೂ ಕುಳಿತುಕೊಳ್ಳಬೇಕು. ಈ ತರಹ ಆದರೆ ಸಭೆಯನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ಇನ್ನೂ ಅನೇಕ ಗಂಭೀರವಾದ ವಿಚಾರಗಳ ಬಗ್ಗೆ ಚರ್ಚೆಯಾಗಬೇಕು. ಆದ್ದರಿಂದ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಈಗ ಏನಾಗಿದೆ ಎಂದರೆ ಬೇರೆ ವಿರೋಧ ಪಕ್ಷಗಳ ಮುಖಂಡರುಗಳು ಕೇಳುತ್ತಿದ್ದೀರಿ. ಇದನ್ನು ನಾನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಿದ್ಧವಿಲ್ಲ. ತಾವು ತಮ್ಮ ಅಭಿಪ್ರಾಯಗಳನ್ನು ಎರಡು-ಎರಡು ನಿಮಿಷದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ತಾವು ಎರಡು ನಿಮಿಷದಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಸ್ತಾಪ ಮಾಡಬಹುದು. ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವ ಅಗತ್ಯ ಇಲ್ಲ. ಆಮೇಲೆ ಸರ್ಕಾರದ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಹೇಳುತ್ತಾರೆ. ಅಲ್ಲಿಗೆ ಈ ವಿಚಾರವನ್ನು ಮುಗಿಸೋಣ. ಈಗ ಮಾನ್ಯ ಮಾಧುಸ್ವಾಮಿಯವರು ಮತ್ತು ಬೇರೆ ವಿರೋಧ ಪಕ್ಷಗಳ ನಾಯಕರು ತಮ್ಮ ಅಭಿಪ್ರಾಯವನ್ನು ಹೇಳಿ. ಆದರೆ ನಾನು ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಿದ್ಧನಿಲ್ಲ. ಮೊದಲು ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಮಾಧುಸ್ವಾಮಿಯವರೇ, ಎರಡು ನಿಮಿಷದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಸನ್ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವ ವೇಳೆಗೆ ಒಂದು ಗುರುತರವಾದಂಥ ಆಪಾದನೆಯನ್ನು ಮಾಡಿದ್ದಾರೆ. ಈ ಹಿಂದೆ ಪಾರ್ಲಿಮೆಂಟ್‌ನಲ್ಲಿ ವಿರೋಧ ಪಕ್ಷದ ನಾಯಕಿಯಾಗಿ ಕೆಲಸ ಮಾಡಿದ್ದಾರೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದು ಒಂದು ಮಹತ್ತರವಾದಂಥ ಸ್ಥಾನ. ಇವತ್ತು ಅವರು ಪಾರ್ಲಿಮೆಂಟಿನ ಸದಸ್ಯರಾಗಿದ್ದಾರೆ. ತಮ್ಮನ್ನು ತಾವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರು ಇಲ್ಲಿ ಇಲ್ಲ. ಇವರು ಆಪಾದನೆ ಮಾಡಿದ್ದಾರೆ. ಆ ಆಪಾದನೆ ಕಡತದಲ್ಲೇ ಉಳಿಯಬೇಕಾ? ಅದನ್ನು ಹಾಗೆಯೇ ಬಿಡುತ್ತೀರಾ? ಅಥವಾ ಇಲ್ಲಿಗೆ ಬಂದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ? ತಮ್ಮ ರೂಲಿಂಗ್‌ನ್ನು ಕೊಡಬೇಕು.

ಅಧ್ಯಕ್ಷರು : ನಾನು ಕಡತ ತರಿಸಿ ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಅಭಿಪ್ರಾಯ ಬಹಳ ಸ್ಪಷ್ಟವಾಗಿದೆ. ಅದು ಇಡೀ ಜಗತ್ತಿಗೇ ಗೊತ್ತಿರತಕ್ಕಂಥಾದ್ದು. ಪ್ರತಿಯೊಂದು ಸಂದರ್ಭದಲ್ಲಿ ಯಾರೂ ಬಂದು ಹೇಳುವುದಕ್ಕೆ ಆಗುವುದಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇಡೀ ದೇಶದಲ್ಲಿ ಇರುವಂಥ ಅಭಿಪ್ರಾಯ.

ಅಧ್ಯಕ್ಷರು : ನಾನು ಕಡತವನ್ನು ತರಿಸಿ ನೋಡಿ ಎಕ್ಸಪಂಜ್ ಮಾಡಬೇಕಾದ ಪದಗಳನ್ನು ಎಕ್ಸಪಂಜ್ ಮಾಡುತ್ತೇನೆ.

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಅಧ್ಯಕ್ಷರು : ಎಲ್ಲಾ ಸದಸ್ಯರಲ್ಲೂ ನನ್ನ ಒಂದು ವಿನಂತಿ ಇಷ್ಟೆ. ಪ್ರತಿಯೊಂದನ್ನೂ ಸಹ ತಮ್ಮ ತಮ್ಮ ಪಕ್ಷಗಳ ಗಾಜಿನಿಂದ ನೋಡಬೇಡಿ. ಯಾವುದೇ ವಿಚಾರವಾಗಲಿ ತಮ್ಮ ನಾಡಿನ ದೃಷ್ಟಿಯಿಂದ, ದೇಶದ ದೃಷ್ಟಿಯಿಂದ ಚರ್ಚೆ ಮಾಡಿರಿ. ಇಲ್ಲಿ ಏನಾಗಿದೆ ಎಂದರೆ ಇದು ಬೇರೆ ಬೇರೆ ರೀತಿಯಲ್ಲಿ ಗಂಭೀರತೆ ಹೋಗುತ್ತದೆ ಎನ್ನತಕ್ಕಂಥ ಮಾತನ್ನು ಎಲ್ಲಾ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ. ಈಗ ಮಾನ್ಯ ರಮೇಶ್ ಕುಮಾರ್ ಅವರು ಎತ್ತಿದ್ದಕ್ಕೆ ನಾನು ಕಡತ ತರಿಸಿ ನೋಡುತ್ತೇನೆ. ಯಾವುದನ್ನು ತೆಗೆದುಹಾಕಬೇಕೆಂದು ನೋಡಿ ಅದನ್ನು ತೆಗೆದುಹಾಕುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿ, ಈಗ ಸಂಸದೀಯ ವ್ಯವಹಾರ ಸಚಿವರಾದ ಪಾಟೀಲರು ಏನಾದರೂ ಹೇಳುವುದು ಇದ್ದರೆ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ತಮ್ಮಲ್ಲಿ ನಾನು ವಿನಂತಿ ಮಾಡುವುದು ಇಷ್ಟೇ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಆ ಭರಾಟೆಯೊಳಗೆ ಅವರೇನು ಬುಧ್ಯಾಪೂರ್ವಕವಾಗಿ ಹೇಳಿದರೋ ಏನೋ ನನಗೆ ಗೊತ್ತಿಲ್ಲ. ಏಕೆಂದರೆ ಆ ಕೆಳಮಟ್ಟದ ಮಾತುಗಳನ್ನು ಯಾವುದೇ ಗೌರವಾನ್ವಿತ ರಾಜಕಾರಣಿಗಳಿಗೆ ಬಳಸಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಿಂದ ನಾನು ಪಾಠ ಹೇಳಿಸಿಕೊಳ್ಳಬೇಕಾಗಿಲ್ಲ. ನೀವು ನನಗೆ ಬುದ್ಧಿ ಹೇಳುವುದಕ್ಕೆ ಆಗುವುದಿಲ್ಲ. ಅದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಗೊಂದಲ

ಶ್ರೀ ಹೆಚ್.ಕೆ. ಪಾಟೀಲ್ : ತಾವು ಬೀದಿಮಟ್ಟದಲ್ಲಿ ಏನು ಮಾತನಾಡುತ್ತಿದ್ದೀರಿ, ಅದಕ್ಕೆ ಇದೇ ಉತ್ತರ. ಅದಕ್ಕೆ ಬೇರೆ ಉತ್ತರ ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ಕಾರ್ಯಕ್ರಮಕ್ಕೆ ಏಕೆ ಅವಕಾಶ ಮಾಡಿಕೊಟ್ಟಿರಿ? ಬಹುಸಂಖ್ಯಾತರ ಕಾರ್ಯಕ್ರಮ ಮಾಡಲು ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ ಅವರು ಮಾತನಾಡಿದ ಮಾತುಗಳನ್ನು ಕಡದಿಂದ ತೆಗೆದುಹಾಕಬೇಕು.

ಅಧ್ಯಕ್ಷರು : ನೀವು ಹೀಗೆ ಪರಸ್ಪರ ಮಾತನಾಡಿದರೆ ಹೇಗೆ?

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಕಡತತರಿಸಿ ನೀಡಿ ಸಾರ್.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಕಡತ ತರಿಸಿ ನೋಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಅವರು ಯಾವ ದುರುದ್ದೇಶದ ಮಾತುಗಳನ್ನಾಡಿದ್ದಾರೆ ಅವುಗಳನ್ನು ತಾವು ಕಡತದಿಂದ ತೆಗೆಸಿ ಹಾಕಬೇಕು. ಅದನ್ನು ತಾವು ಇವತ್ತು ನೋಡಿ ನಾಳೆ ತೆಗೆಸಿ ಹಾಕುವುದಿಲ್ಲ. ಈಗಾಗಲೇ ತಾವು ಅದನ್ನು ಗಮನಿಸಿದ್ದೀರಿ. ಸೋನಿಯಾ ಗಾಂಧಿಯವರ ಬಗ್ಗೆ ಅವರು ಏನೇನು ಶಬ್ದ ಮಾತನಾಡಿದರು, ಅದು ರಾಜಕೀಯ ದುರುದ್ದೇಶಪೂರಿತವಾಗಿರತಕ್ಕಂಥಾದ್ದು, ಈ ಸದನದಲ್ಲಿ ಆಡಬಾರದಾಗಿರತಕ್ಕಂಥ ಮಾತುಗಳನ್ನಾಡಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಎಲ್ಲವನ್ನೂ ತಕ್ಷಣವೇ ತೆಗೆದುಹಾಕಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಈ ದೇಶದ ಸಂವಿಧಾನದಲ್ಲಿ ಎಲ್ಲಾ ಧರ್ಮೀಯರಿಗೂ ಅವರವರ ಧರ್ಮದ ಬಗ್ಗೆ, ಅವರಿಗೆ ಇಷ್ಟ ಬಂದಹಾಗೆ ಮಾತನಾಡಲಿಕ್ಕೆ ಅವಕಾಶ ಇದೆ. ಬೆನ್ನಿಹಿನ್ನಾರವರು ಇಲ್ಲೇಕೆ ಬಂದರು, ಸಭೆ ಏಕೆ ನಡೆಸಿದರು ಎಂದು ಕೇಳುವ ಪರಿಸ್ಥಿತಿಯಲ್ಲಿ ನಾನು ಈ ದೇಶದ ಪ್ರಜೆಯಾಗಿ ಇಲ್ಲ. ಏಕೆಂದರೆ, ಸಂವಿಧಾನ ಗ್ಯಾರಂಟಿ ಮಾಡಿರುವ ಹಕ್ಕನ್ನು ಕಿತ್ತುಕೊಳ್ಳಬೇಕೆಂದು ಹೇಳಿ.....

ಡಾ. ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) : ಅವರು ಇಲ್ಲೇಕೆ ಬಂದರು ಎಂದು ಕೇಳುವ ಪರಿಸ್ಥಿತಿಯಲ್ಲಿ ಇಲ್ಲವೆಂದು ಹೇಳುತ್ತೀರಿ ಮತ್ತೆ ಅವರಿಗೆ ಇಷ್ಟಬಂದಹಾಗೆ ಮಾತನಾಡಲಿಕ್ಕೆ ಅವಕಾಶ ಇದೆಯೆಂದು ಹೇಳುತ್ತೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರ ಅಭಿಪ್ರಾಯಗಳನ್ನು ಅಭಿವ್ಯಕ್ತಪಡಿಸಲಿಕ್ಕೆ ಅಧಿಕಾರ ಇದೆಯೆಂದು ಹೇಳಿದೆ. ಅದೊಂದು ಫಂಡಮೆಂಟಲ್ ರೈಟ್ಸ್ ಅಲ್ಲವೇ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಸೇರಿಸಿದ್ದಾರೆ, ಡಾಕ್ಟರೇ ನೀವು ಸ್ವಲ್ಪ ಓದಿ, ಬರೀ ಮೆಡಿಸಿನ್ ಬಗ್ಗೆ ಓದಿಕೊಂಡು ಇಲ್ಲಿ ಬಂದರೆ ಹೀಗಾಗುತ್ತದೆ. ಅವರು ಏನು ಮಾತನಾಡಿದರು ಎನ್ನುವುದಕ್ಕಿಂತ ಹೆಚ್ಚಾಗಿ ಒಂದೇ ಒಂದು ನೋವಿನ ಸಂಗತಿ ಎಂದರೆ ಬಹಳ ಸೂಕ್ಷ್ಮ ಪ್ರದೇಶದಲ್ಲಿ ಈ ಸಭೆ ನಡೆಸಲಿಕ್ಕೆ ತಾವು ಬಿಟ್ಟಿದ್ದೀರಿ. ಏರ್‌ಪೋರ್ಟ್‌ಗಳನ್ನು ಕೊಡುವುದು, ರೈಲ್ವೆ ಸ್ಟೇಷನ್‌ಗಳನ್ನು ಕೊಡುವುದು ಅಥವಾ ಬಸ್ ಸ್ಟ್ಯಾಂಡ್‌ಗಳನ್ನು ಇಂತಹ ಕಾರ್ಯಕ್ರಮಕ್ಕೆ ಕೊಡುವುದು ಒಳ್ಳೆಯ ಸಂಪ್ರದಾಯ ಆಗುವುದಿಲ್ಲ. ಅದರಲ್ಲೂ ಏರ್‌ಪೋರ್ಟನ್ನು ಕೊಟ್ಟಿರುವುದು, ಅತ್ಯಂತ ಸೂಕ್ಷ್ಮವಾದ ಪ್ರದೇಶ ಎಂದು ಗೊತ್ತಿದ್ದೂ, ಅಲ್ಲಿ ಈ ಸಭೆ ನಡೆಸಬೇಕಾಗಿತ್ತಾ? ಎರಡನೆಯದು, ನಿಮಗೆ ಆರು ತಿಂಗಳಿನಷ್ಟು ಅವಕಾಶ ಇತ್ತು. ಆ ಸಭೆಯನ್ನೇ ಮಾಡಬೇಕಾಗಿದ್ದರೆ, ಬೇರೆ ಜಾಗದಲ್ಲಿ ಮಾಡಬೇಕಾಗಿತ್ತು. ಮೂರನೆಯದು, ಈ ಕಾರ್ಯಕ್ರಮಕ್ಕೆ ಎಷ್ಟು ಖರ್ಚಾಗಿತ್ತು, ಇದರಲ್ಲಿ ಯಾರು ಯಾರು ಇನ್‌ವಾಲ್ ಆಗಿದ್ದಾರೆ, ನಮಗೆ ಎಷ್ಟು ಟ್ಯಾಕ್ಸ್ ಬಂತು, ನಮ್ಮಿಂದ ಎಷ್ಟು ಖರ್ಚಾಯಿತು ಎಂಬುದನ್ನು ದಯಮಾಡಿ ಈ ಸಭೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಮಾಡಬೇಕಾಗುತ್ತದೆ. ಇದು ಯಾರಿಗೋಸ್ಕರ? ಇದೇನು ಖಾಸಗಿ ಕಾರ್ಯಕ್ರಮವೇ ಅಥವಾ ಸರ್ಕಾರಿ ಕಾರ್ಯಕ್ರಮವೇ? ಖಾಸಗಿ ಕಾರ್ಯಕ್ರಮಕ್ಕೆ ತಾವು ಅತಿಥಿಗಳಾಗಿ ಹೋದಿರೋ ಅಥವಾ ನೀವೇ ಏನಾದರೂ ಸ್ಪಾನ್ಸರ್ ಮಾಡಿ ಈ ಕಾರ್ಯಕ್ರಮ ಮಾಡಿದಿರಾ ನಮಗೆ ಗೊತ್ತಿಲ್ಲ. ನಾನು ಸ್ಪಷ್ಟವಾಗಿ ಕೇಳುವುದು ಎಂದರೆ, ಈ ಸದನಕ್ಕೆ ಹಕ್ಕು ಇದೆ. ಆ ಕಾರ್ಯಕ್ರಮವನ್ನು ನಿಯೋಜನೆ ಮಾಡಲಿಕ್ಕೆ ಸರ್ಕಾರಕ್ಕೆ ಎಷ್ಟು ಖರ್ಚಾಯಿತು? ಅಲ್ಲಿ ನಮ್ಮ ಪೋಲೀಸಿನವರಿಗೆ ಹಣ ಕೊಟ್ಟವರು ಯಾರು? ಅಲ್ಲಿ ನಮ್ಮ ವಾಹನಗಳಿಗೆ ಹಣ ಕೊಟ್ಟವರು ಯಾರು? ಇವತ್ತು ಆಗಿದೆ, ಟ್ಯಾಕ್ಸ್ ಕಟ್ಟಿಲ್ಲವೆಂದು ಸೀಜ್ ಮಾಡಿದ್ದಾರೆ. ಕನಿಷ್ಠ ಆಡಳಿತಾತ್ಮಕ ದೃಷ್ಟಿಯಲ್ಲಿ ಇದನ್ನೆಲ್ಲಾ ನೀವು ಕ್ಲಿಯರ್ ಮಾಡಿಕೊಳ್ಳಬೇಕಾಗಿತ್ತು. ಟ್ಯಾಕ್ಸ್ ಏಕೆ ಕಟ್ಟಲಿಲ್ಲ, ಕುರ್ಚಿ ಏಕೆ ಹಿಡಿದಿಟ್ಟರು, ಲಾರಿ ಏಕೆ ಸೀಜ್ ಮಾಡಿದರು, ಅವರನ್ನು ಏರ್ ಪೋರ್ಟ್‌ನಲ್ಲಿ ಏಕೆ ತಡೆದು ನಿಲ್ಲಿಸಿದರು. ಈ ಕ್ಲಿಯರೆನ್ಸ್‌ಗಳು ಇಲ್ಲದೇ ಇಂತಹ ಸಭೆಗಳನ್ನು ಒಂದು ರಾಜ್ಯದಲ್ಲಿ ನಡೆಸುವುದಕ್ಕೆ ತಾವು ಅನುವು ಮಾಡಿಕೊಟ್ಟರೆ, ಮುಂದೆ ವ್ಯವಹಾರ ಬೇಕಾಬಿಟ್ಟಿ ಆಗಿಬಿಡುತ್ತದೆ. ಅವರು ಬರಲಿ, ಅವರವರ ಧರ್ಮ ಪ್ರಚಾರ ಮಾಡಲಿ, ನೊಂದಿರುವವರು ಅಥವಾ ಬೇಕಾದವರು ಯಾರಾದರೂ ಮತಾಂತರ ಆಗಲಿಕ್ಕೆ ನಾವು ಯಾರು ಅಡ್ಡಿ ಮಾಡಲಿಕ್ಕೆ? ಯಾಶಯದೋ ಜನರನ್ನು ಸುಖವಾಗಿ

ಬಾಳಲಿಕ್ಕೆ ಬಿಡಲಿಲ್ಲವೆಂದರೆ, ಅವರು ಇಷ್ಟಪಟ್ಟ ಕಡೆ ಹೋಗಿ ಸುಖವಾಗಿ ಇರಲಿ ಬಿಡಿ. ನಾವೇನು ಇಲ್ಲಿ ಕಳೆದುಕೊಳ್ಳುತ್ತೇವೆ. This is not fair. ಅದು ನನ್ನ ಇಷ್ಟ. ನಾನು ಯಾವ ಧರ್ಮವನ್ನು ಆಚರಣೆ ಮಾಡಬೇಕು ಯಾವ ಧರ್ಮವನ್ನು ಒಪ್ಪಬೇಕು ಎಂಬುದು ನನ್ನ ಇಷ್ಟ. ನಾವು, ಅವರನ್ನು ಹೋಗಬಾರದು ಎಂದರೆ ಹೇಗೆ? ಅವರನ್ನು ಪ್ರೀತಿಸಬೇಕು, ಅವರನ್ನು ನಮ್ಮವರು ಎಂದು ಭಾವಿಸಬೇಕು ಅವರ ಒಡನಾಟ ಇಟ್ಟುಕೊಳ್ಳುವುದನ್ನು ಬಿಟ್ಟರೆ, ಯಾರೋ ಬೆನ್ನಿಹಿನ್ ಬಂದು ನಮ್ಮನ್ನೆಲ್ಲಾ ಮತಾಂತರ ಮಾಡುತ್ತಾರೆ, ಇನ್ನಾರೋ ಬಂದುಬಿಟ್ಟು ನಮ್ಮನ್ನೆಲ್ಲಾ ಶಂಕರಾಚಾರ್ಯರನ್ನು ಮಾಡುತ್ತಾರೆ, ಇನ್ನಾರೋ ಬಂದುಬಿಟ್ಟು ನಮ್ಮನ್ನೆಲ್ಲಾ ಬಸವಣ್ಣನವರನ್ನು ಮಾಡುತ್ತಾರೆ ಬುದ್ಧನನ್ನು ಮಾಡುತ್ತಾರೆಂದು ಹೇಳುವುದು ನನಗೇನೂ ಅಷ್ಟು ಚೆನ್ನಾಗಿ ಕಾಣಲಿಲ್ಲ. ಆಡಳಿತಾತ್ಮಕ ಲೋಪಗಳೇನಾಗಿದೆ ಅದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಈ ಸಭೆಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೇ, ನಾನು ಸುಮಾರು ಅಮೇರಿಕಾ ಪಾದ್ರಿ ಬಂದಾಗಿನಿಂದ ಇಲ್ಲಿಯವರೆಗೆ ನೋಡುತ್ತಾ ಇದ್ದೇನೆ. ನಾನು ಯಾವುದನ್ನೂ ಮಾತನಾಡಿಲ್ಲ. ಬಹುಶಃ ಹಿಂದೂ ಧರ್ಮದ ಬಗ್ಗೆಯೇ ಆಗಲೀ, ಮತಾಂತರದ ಬಗ್ಗೆಯೇ ಆಗಲೀ ಅಥವಾ ಪಾದ್ರಿ ಬಗ್ಗೆಯೇ ಆಗಲೀ ನಾ ಇವತ್ತಿನವರೆಗೆ ಮಾತನಾಡಿಲ್ಲ. ಇವರಿದನ್ನೆಲ್ಲಾ ನೋಡುತ್ತಾ ಸುಮ್ಮನೆ ಗಂಭೀರವಾಗಿ ಕುಳಿತಿದ್ದೆ. ಜೊತೆಗೆ ಮುಖ್ಯಮಂತ್ರಿಗಳು ಭಾಗವಹಿಸಿದ್ದರು ಮತ್ತು ಮಾಜಿ ಪ್ರಧಾನಿಗಳು ಭಾಗ ವಹಿಸಿದ್ದರು. ಅಲ್ಲಿಗೆ ಹೋದರು, ಬಂದರು. ಇವೆಲ್ಲವನ್ನೂ ನಾನು ಗಮನಿಸುತ್ತಾ ಇದ್ದೇನೆ. ನನಗನ್ನಿಸುತ್ತದೆ, ಅಮೇರಿಕಾ ಪಾದ್ರಿಯೊಬ್ಬ ಈ ದೇಶಕ್ಕೆ ಬಂದು ಹಿಂದೂ ಧರ್ಮವನ್ನೇ ನಾಶ ಮಾಡಿಬಿಡುತ್ತಾನೆ ಎನ್ನುವ ಭಯ ಭೀತಿ ನಮಗೆ ಬರುವುದಾದರೆ, ಆ ಹಿಂದೂ ಧರ್ಮಕ್ಕೆ ಶಕ್ತಿ ಇಲ್ಲವೆಂದು ಅರ್ಥವಾಗುತ್ತದೆ. ಯಾರೋ ಬರುತ್ತಾನೆ, ಇಲ್ಲೇನೋ ಕೂಗಿಕೊಳ್ಳುತ್ತಾನೆ, ಕೂಗಿ ಹೋಗಲಿ. ನಾವೇಕೆ ಇದಕ್ಕೆ ದೊಡ್ಡ ಪ್ರಚಾರ ಕೊಡಬೇಕು? ಆ ಮನುಷ್ಯ ಇಲ್ಲಿ ಬಂದಿದ್ದಕ್ಕೆ ಭಾರಿ ಪ್ರಚಾರ ಸಿಕ್ಕಿತು. ಅವರು ಬರುವುದಕ್ಕಿಂತ ಹೆಚ್ಚಾಗಿ, ನಾವು ಕೊಟ್ಟ ಪ್ರಚಾರ ಇದೆಯಲ್ಲಾ ಅದು ಜಾಸ್ತಿ. ಅಲ್ಲಿ ನೋಡಿದರೆ, ಏನೂ ಇಲ್ಲ. ಅದೊಂದು ದೊಡ್ಡ ಸೊನ್ನೆ. ಆತ ಬರುತ್ತಿದ್ದರು, ನಾಲ್ಕು ಮಾತುಗಳನ್ನು ಹೇಳುತ್ತಿದ್ದರು, ನಂತರ ಹೋಗುತ್ತಿದ್ದರು. ಅದಕ್ಕೆ ನಾವೇಕೆ ತಲೆಕೆಡಿಸಿಕೊಳ್ಳಬೇಕಾಗಿತ್ತು? ಏನು ಆಕಾಶವೇ ಭೂಮಿಗೆ ಇಳಿದು ಬಂದಹಾಗೆ ಇತ್ತು. ಆ ವ್ಯವಸ್ಥೆಗಳನ್ನು ನಾನು ಟಿ.ವಿ.ಯಲ್ಲಿ ನೋಡುತ್ತಿದ್ದೆವು. ಆ ಮಾಂತ್ರಿಕ ಮಾಡತಕ್ಕಂಥ ವ್ಯವಸ್ಥೆಗಳು, ಯಾರನ್ನೋ ತಳ್ಳಿಬಿಡುವುದು, ಅವನು ಕೆಳಗೆ ಬಿದ್ದೇಬಿಡುವುದು. ಯಾರೋ ಹೋಗಿಬಿಡುವುದು. ಮುಖ್ಯಮಂತ್ರಿಗಳನ್ನು ತಬ್ಬಿಕೊಳ್ಳುವುದು, ಇದನ್ನೆಲ್ಲಾ ನಾವು ನೋಡುತ್ತಿದ್ದೇವೆ ಇದೆಲ್ಲಾ ಏನು ಕತೆ, ಏನು ವ್ಯವಸ್ಥೆಗಳು....

ಗೊಂದಲ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಅವರು ಮಾತನಾಡಲಿ. ಯಾವುದಾದರೂ ಇದ್ದರೆ, ನೀವು ಅನಂತರ ಮಾತನಾಡಿ. ಈ ತರಹ ಎಲ್ಲರೂ ಒಟ್ಟಿಗೆ ನಿಂತು ಮಾತನಾಡಿದರೆ ಹೇಗೆ?

XX ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ನನಗಂತೂ ನಂಬಿಕೆ ಇಲ್ಲ. ಪ್ರಪ್ರಥಮವಾಗಿ ಮಠಾಧಿಪತಿಗಳು.....

ಗೊಂದಲ

ಅಧ್ಯಕ್ಷರು : ಕುಳಿತುಕೊಳ್ಳಿ, ಏನಾದರೂ ಅಬ್ಜಕ್ಷನ್ ಇದ್ದರೆ, ಅನಂತರ ಅವಕಾಶ ಕೊಡುತ್ತೇನೆ. ಎಲ್ಲರೂ ಒಮ್ಮೆಗೇನಿಂತುಕೊಂಡು ಮಾತನಾಡುತ್ತಿದ್ದರೆ, ನೀವೇನು ಮಾತನಾಡುತ್ತಿದ್ದೀರಿ ಎಂಬುದೇ ಗೊತ್ತಾಗುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : XX ದಯಮಾಡಿ, ಅದನ್ನು ಕಡತದಿಂದ ವಾಪಸ್ ತೆಗೆಸಿ. XX ಎನ್ನುವ ಪದವನ್ನು ಕಡತದಿಂದ ತೆಗೆಸಬೇಕು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜರವರು ಮಾಜಿ ಪ್ರಧಾನಿಗಳ ಬಗ್ಗೆ; ಪದೇ ಪದೇ ಮಾತನಾಡುತ್ತಿರುವುದು ಇದು ಎರಡನೇ ಬಾರಿ. ಇದು ಆಗಬಾರದು. ಹಿರಿಯ ಸದಸ್ಯರಾಗಿ ಈ ರೀತಿ ಮಾತನಾಡಲಿಕ್ಕೆ ಅವಕಾಶ ಕೊಡಬಾರದು.

ಶ್ರೀ ವಾಟಾಳ್ ನಾಗರಾಜ್ : ತಾವು ಬೇಕಾದರೆ ಅದನ್ನು ಕಡತದಿಂದ ವಾಪಸ್ ತೆಗೆಸಿ. ನನ್ನದೇನೂ ಅಭ್ಯಂತರ ಇಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ಕೆಲವು ಪದಗಳನ್ನೇನು ಉಪಯೋಗಿಸಿದ್ದಾರೆ, ಅದು ಸಭಾ ನಿಯಮಗಳಿಗೆ ವಿರೋಧವಾದದ್ದು, ಅನ್ ಪಾರ್ಲಿಮೆಂಟರಿ ಎಂದು ಏನು ಹೇಳುತ್ತಿದ್ದಾರೆ ನಾನು ಕಡತ ತರಿಸಿ; ಅಂತಹ ಎಲ್ಲವನ್ನೂ ತೆಗೆದುಹಾಕುತ್ತೇನೆ. ದಯಮಾಡಿ ಕುಳಿತುಕೊಳ್ಳಿ. ಸದನದಲ್ಲಿ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗನ್ನಿಸುತ್ತದೆ, ಈ ತರಹ ಮೂಢ ನಂಬಿಕೆಗಳು ಈ ವ್ಯವಸ್ಥೆಗಳು, ಇದರ ಬಗ್ಗೆ ನಾವು ತೀವ್ರವಾದಂಥ ಒಂದು ಚಿಂತನೆ ಮಾಡಬೇಕಾಗುತ್ತೆ. ಜೊತೆಗೆ, ಇತಿಹಾಸದಲ್ಲಿ ಮಠಾಧಿಪತಿಗಳು ಬೀದಿಗೆ ಬರುವುದು, ನಮ್ಮ ಧರ್ಮ ಹಾಳಾಗುತ್ತೆ ಎಂದು ಮಠಾಧಿಪತಿಗಳು ಬೀದಿಗೆ ಬರುತ್ತಾರೆ. ನೀವು ಬೇರೆಯವರನ್ನೆಲ್ಲಾ ಬಂಧಿಸುತ್ತೀರಿ ಆದರೆ, ಈ ಮಠಾಧಿಪತಿಗಳನ್ನು ಏಕೆ ಬಂಧಿಸಲಿಲ್ಲ? ಅಷ್ಟೊಂದು ಜನ ಮಠಾಧಿಪತಿಗಳು ಬಂದರಲ್ಲಾ, ಅವರು ಏಕೆ ಬರಬೇಕು? ಅವರು ಧರ್ಮ ಹೇಳಿಕೊಂಡು, ಮಠದಲ್ಲಿ ವೇದಾಂತ, ತತ್ವ ಧರ್ಮ ಹೇಳಬೇಕೇ ಹೊರತು ವಿಧಾನ ಸೌಧಕ್ಕೆ ಬಂದು, ಧ್ವಜ ಹಿಡಿದು ಪ್ರತಿಭಟನೆ ಮಾಡತಕ್ಕಂಥ ಮಠಾಧಿಪತಿಗಳು. ಅವರೆಲ್ಲಾ ಬಂದಾಗ, ತಾವೆಲ್ಲರೂ ಹೋಗಿ ಅವರ ಪಾದಕ್ಕೆ ಬಿದ್ದು, ಶರಣಾರ್ಥಿ ಎಂದು ಅವರನ್ನು ಕರೆದುಕೊಂಡು ಬಂದು ಹನಮಂತಯ್ಯನವರ ಪ್ರತಿಮೆ ಹತ್ತಿರ ಕರೆದುಕೊಂಡು ಬಂದು, ತಾವು ಹೇಳಿದ್ದೆಲ್ಲಾ ಮಾಡುತ್ತೇವೆ ಎಂದು ಹೇಳುವುದು. ಇದು ಸರಿ ಎಂದು ನನಗನ್ನಿಸಲಿಲ್ಲ. ಮಠಾಧಿಪತಿಗಳು ಬೀದಿಗೆ ಇಳಿಯಬಾರದು. ಖಂಡಿತ ನನಗೇನೂ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕಾಗಿಲ್ಲ. ಅವರು ಏಕೆ ಕೊಡಬೇಕು? ಅವರನ್ನು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ, ಅವರನ್ನು ಒಬ್ಬ ಮುಖ್ಯಅತಿಥಿಗಳಾಗಿ ಅವರು ಕರೆದಿದ್ದಾರೆ. ಅವರೇಕೆ ರಾಜಿನಾಮೆ ಕೊಡಬೇಕು? ನಾನು ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದರೆ, ಅಲ್ಲಿನ ವ್ಯವಸ್ಥೆಗಳು ಇದೆಯಲ್ಲಾ, ಆ ರೀತಿ ತಬ್ಬಿಕೊಳ್ಳುವುದು, ಬೀಳುವುದು ಇದು ಅತ್ಯಂತ

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಒಂದುತರಹ ಅನಾಗರೀಕವಾದ ವರ್ತನೆ. ಇಂತಹ ವರ್ತನೆ ಎಲ್ಲೂ ನಡೆಯಬಾರದು. ಆಮೇಲೆ, ಆ ವ್ಯಕ್ತಿ ಹೀಗೆ ತಳ್ಳಿಬಿಡುವುದು, ಹೀಗೆ ಅಂಟಿಕೊಳ್ಳುವುದು. ಇದೆಲ್ಲಾ ಮೊದಲೇ ಯೋಜನೆ. ಕಾಲು ಮುರಿದುಕೊಂಡವರು, ಕೈ ಮುರಿದುಕೊಂಡವರು ಅಲ್ಲಿಗೆ ಬರುವುದು ನಾನೊಂದು ಡಬ್ಬ ತಯಾರು ಮಾಡಿದ್ದೇನೆ. ನಿಮಗೂ ಬೇಕಾದರೆ ತೆಗೆದುಕೊಳ್ಳಿ. ಒಳ್ಳೆಯ ಔಷಧಿ. ನಾನಾ ರೀತಿಯ ಗಿಡ ಮೂಲಿಕೆಗಳಿಂದ ತಯಾರು ಮಾಡಿದ್ದೇನೆ. ಅದೇನು ಅದು ಆ ಡಬ್ಬ ಅಂದರೆ 25 ವರ್ಷದ ಹುಡುಗ ಅಲ್ಲ, 75 ವರ್ಷದ ಮುದುಕ 25 ವರ್ಷದ ಹುಡುಗನಾಗಬಹುದು. ನನ್ನ ಹತ್ತಿರ ಇದೆ. ನೀವು ಯಾರಾದರೂ ಬರಬಹುದು, ಇದಕ್ಕೆ ನಾನು ಹಿಮಾಲಯದಿಂದ ಎಲ್ಲಾ ಬೆಟ್ಟಗಳಿಂದ ತಂದಿರತಕ್ಕಂಥ ಗಿಡಮೂಲಿಕೆಗಳು, ಏನೇನೋ ಹಾಕಿದ್ದೇನೆ. ಅದರ ಜೊತೆಗೆ ಇನ್ನೊಂದು ಬೇರೆ ಹಾಕಿದ್ದೇನೆ. ನೀವು ಆ ಡಬ್ಬ ತೆಗೆದುಕೊಳ್ಳಬೇಕೆಂದು ಎಷ್ಟು ಜನ ಇದ್ದೀರಿ ಎನ್ನುವುದು ಮೊದಲು ನನಗೆ ಹೇಳಬೇಕು. ಆಮೇಲೆ ಅದಕ್ಕೆ ಏನು ಹಾಕಿದ್ದೇನೆಂದು ಹೇಳುತ್ತೇನೆ. ಇದರಿಂದ ನಿಜಕ್ಕೂ 75 ವರ್ಷದವರೂ 25 ವರ್ಷದವರಾಗಿ ಆಗಬಹುದು. ಮೂರು ಮೂರು ಜನರನ್ನು ಮದುವೆಯಾಗಬಹುದು ಏನೂ ತೊಂದರೆ ಇಲ್ಲ. ಅದರಲ್ಲಿ ಏನೂ ತೊಂದರೆಯೇ ಇಲ್ಲ. ಆದ್ದರಿಂದ ಯಾರಾದರೂ ಆ ತರಹದವರು ಇದ್ದರೆ ಕೊನೆಯಲ್ಲಿ ಆ ಡಬ್ಬದಲ್ಲಿ ಎಲ್ಲವನ್ನೂ ಸೇರಿಸಿದ್ದೇನೆ. ಆ ಡಬ್ಬವನ್ನು ನಾನು ಇನ್ನೂ ಮಾರಾಟಕ್ಕೆ ಬಿಟ್ಟಿಲ್ಲ. ಹೊರಗಡೆ ಹೇಳಿಲ್ಲ. ಅಂದರೆ ನಮ್ಮ ಜನ ಎಷ್ಟು ಮೌಢ್ಯಕ್ಕೆ ತಲೆ ಕೊಡುತ್ತಾರೆ ಎನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. ಈಗ ನಾನು ನಾಳೆ ಈ ಒಂದು ಜಾಹೀರಾತು ಹಾಕಿ ಬೀದಿಗೆ ಬಿಡುಗಡೆ ಮಾಡಿದೆ ಎಂದು ಹೇಳಿದರೆ 70 ವರ್ಷದ ಮುದುಕರು ಎಲ್ಲರೂ ಇದನ್ನು ತೆಗೆದುಕೊಳ್ಳುವುದಕ್ಕೆ ಸಿಕ್ಕಾಪಟ್ಟೆ ಕ್ಯೂ ನಿಲ್ಲುತ್ತಾರೆ. ಅದರಲ್ಲಿ ಈ ಕೆಲವು ಪ್ರಾಣಿಗಳ ಮಲಮೂತ್ರವನ್ನು ಸೇರಿಸಿದ್ದೇನೆ. ನಾಯಿದು ಹಂದಿದು, ಎಲ್ಲಾ ಸೇರಿಸಿದ್ದೇವೆ. ಇದನ್ನು ತೆಗೆದುಕೊಂಡರೆ 75 ವರ್ಷದ ಮುದುಕರು 25 ವರ್ಷದ ಹುಡುಗರು ಆಗಬಹುದು. ಯಾರು ಬೇಕಾದರೂ ತೆಗೆದುಕೊಳ್ಳಬಹುದು. ಅಂದರೆ ಈ ತರಹ ನಾವು ನಾಟಕೀಯವಾಗಿ ಈ ಭವ್ಯ ದೇಶದಲ್ಲಿ ಈ ತರಹ ದೇವಮಾನವ ಎಂದು ಹೇಳುವುದು, ದೈವ ಮಾನವ ಎಂದು ಹೇಳುವುದು ವಿಚಿತ್ರವಾದ ವರ್ತನೆಗಳು, ವಿಚಿತ್ರವಾದ ಮಾತುಗಳು ಏನಿದೆಲ್ಲಾ? ಇದಕ್ಕೆ ಕಾರಣ ಯಾರೆಂದರೆ ನಮ್ಮ ರಾಜಕಾರಣಿಗಳೇ, ನಾವೇ ಅವರನ್ನೆಲ್ಲಾ ಬೆಳೆಸುತ್ತಿದ್ದೇವೆ. ಅವರ ಕಾಲುಗಳಿಗೆ ಬೀಳುತ್ತಿದ್ದೇವೆ. ಹಾರ ಹಾಕುತ್ತಿದ್ದೇವೆ ತುರಾಯಿ ಹಾಕುತ್ತಿದ್ದೇವೆ. ಅವರ ಹತ್ತಿರ ಹೋಗುತ್ತಿದ್ದೇವೆ, ಏನು ವೈಭವವಾಗಿ ಅವರು ಹೇಳಿದ್ದನ್ನೆಲ್ಲಾ ನಾವು ಕೇಳುತ್ತೇವೆ. ಈ ಒಂದು ಮೌಢ್ಯದ ವಿರೂಪ, ನನಗನ್ನಿಸುತ್ತದೆ ಇದು ಹೋಗಬೇಕು, ಇದರ ಬಗ್ಗೆ ನಾವು ಮಾತನಾಡಬಾರದು ಏಕೆಂದರೆ ನಾವೆಲ್ಲಾ ಚುನಾವಣೆಗೆ ನಿಲ್ಲುವುದರಿಂದ ಸತ್ಯ ಹೇಳುವುದಕ್ಕೆ ಹೋದಾಗ ಅನೇಕರಿಂದ ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ಆದ್ದರಿಂದ ಸತ್ಯ ಹೇಳಬಾರದಲ್ಲಾ ಎಂದು ಸುಮ್ಮನೇ ಇದ್ದೇವೆ. ಮಾನ್ಯ ಮಹದೇವಪ್ಪನವರೇ, ತಮಗೆ ಗೊತ್ತಿರಬೇಕು. ನಾನು ಸಾಮಾನ್ಯವಾಗಿ ಕಾಲಿಗೆ ಬೀಳುವುದಕ್ಕೆ ಹೋಗುವುದಿಲ್ಲ. ಏನು ವಾಟಾಳ್ ನಾಗರಾಜ್‌ರವರು ಕಾಲಿಗೆ ಬೀಳುವುದಿಲ್ಲ ಎಂದು ಕೆಲವರಿಗೆ ಬಹಳ ಕೋಪತಾಪಗಳು, ಅನೇಕ ವಿಚಾರಗಳು ಇವೆ. ನಾನು ಕಾಲಿಗೆ ಬಿದ್ದರೆ ನಮ್ಮ ತಾಯಿ, ನಮ್ಮ ತಂದೆ ಅದು ಬಿಟ್ಟರೆ ಬೇರೆ ಯಾರ ಕಾಲಿಗೂ ನಾನು ಬಿದ್ದವನಲ್ಲ. ಈ ಕಾಲಿಗೆ ಬೀಳುವುದೇ ಕೆಲವರು ಅಭ್ಯಾಸವಾಗಿಬಿಟ್ಟಿದೆ. ಯಾವಾಗಲೂ ಕಾಲಿಗೆ ಬೀಳುವುದೇ ಕೆಲವರ ಅಭ್ಯಾಸ. ಪಾದ ಪೂಜೆ ಮಾಡುವುದೇ ಕೆಲವರ ಅಭ್ಯಾಸ. ತೀರ್ಥ ಕುಡಿಯುವುದೇ ಕೆಲವರ ಅಭ್ಯಾಸ. ಇದನ್ನೆಲ್ಲಾ

ಮಾತನಾಡುವುದಕ್ಕೆ ಹೋದರೆ ನಾಳೆ ಇದಕ್ಕೆ ಹೊಂದಿಕೊಂಡಿರತಕ್ಕಂಥ ಕೆಲವು ಮತದಾರರು ಇದ್ದಾರಲ್ಲಾ ಅವರು ನಮಗೆ ಓಟು ಹಾಕುವುದಿಲ್ಲ. ಅವರು ನಮಗೆ ಓಟು ಹಾಕಲಿಲ್ಲ ಅಂದರೆ ನಾವು ಜಟಕಾ ಗಾಡಿಯಲ್ಲಿ ತಿರಗಾಡಬೇಕು. ಆದ್ದರಿಂದ ಓಟು ಹಾಕಿಸಿಕೊಳ್ಳಬೇಕೆನ್ನುವಾಗ ಇವರು ಹೇಳಿದ್ದನ್ನೆಲ್ಲಾ ನಾವು ಕೇಳಬೇಕಾಗಿದೆ. ಇದು ಪರಿಸ್ಥಿತಿಯ ನಿರ್ಮಾಣ. ಅದಕ್ಕೆ ಅನೇಕ ಕಡೆ ನನ್ನನ್ನು ಕರೆಯುತ್ತಾರೆ. ನಾನು ಯಾವ ಧಾರ್ಮಿಕ ಸಮ್ಮೇಳನಕ್ಕೂ ಹೋಗಿಲ್ಲ. ನಾನು ಯಾವ ಜಾತಿ ಸಮ್ಮೇಳನಕ್ಕೂ ಹೋಗಿಲ್ಲ. ನಾನು ಒಬ್ಬನೇ ಇಡೀ ಕರ್ನಾಟಕ ರಾಜ್ಯದಲ್ಲಿ ಜಾತ್ಯಾತೀತ ತಾವು ಈ ರಾಜ್ಯದ ಒಂದು ಶಾಲೆಯಲ್ಲಿ ಪಂಡಿತರಾಗಿದ್ದಿರಿ, ಉಪಾಧ್ಯಾಯರಾಗಿದ್ದಿರಿ. ಈಗ ಈ ಒಂದು ಉನ್ನತಮಟ್ಟಕ್ಕೆ ಬಂದಿದ್ದೀರಿ, ತಾವು ಇದುವರೆಗೂ ನೋಡಿದ್ದೀರಿ. ನನ್ನನ್ನು ತಾವು 20–30 ವರ್ಷಗಳಿಂದ ನೋಡಿದ್ದೀರಿ. ಎಲ್ಲಾದರೂ ಒಂದು ಕಡೆ ಯಾವುದಾದರೂ ಒಂದು ಕಡೆ ಹೋಗಿ ನಾನು ಈ ಕೆಲಸ ಮಾಡಿದ್ದೇನೆಂದು ತಾವು ಹೇಳಿಬಿಟ್ಟರೆ ನೀವು ಹೇಳಿದ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ನಾಳೆಬೆಳಿಗ್ಗೆ ನಾನು ರಾಜೀನಾಮೆ ಕೊಟ್ಟು ಹೊರಟು ಹೋಗುತ್ತೇನೆ. ಈ ರಾಜ್ಯದ ಜನ ಎಲ್ಲರೂ ಒಂಜೇ, ಈ ದೇಶದ ಜನ ಎಲ್ಲರೂ ಒಂದೇ ನಮ್ಮಲ್ಲಿ ಬೇಧಭಾವ ಮಾಡಬಾರದು ಎನ್ನತಕ್ಕ ಒಂದು ಉದಾತ್ತವಾದ ಉದ್ದೇಶ ಇಟ್ಟುಕೊಂಡು ಇರತಕ್ಕಂಥ ವ್ಯಕ್ತಿ ನಾನು ಅನೇಕರಿಗೆ ನಾನು ಯಾರು ಎನ್ನುವುದು ಬಹಳ ವರ್ಷಗಳಿಂದ ಗೊತ್ತಿರಲಿಲ್ಲ. ಈಗ ಸುಮ್ಮಸುಮ್ಮನೆ ಗೊತ್ತಾಗುತ್ತದೆ ಆ ವೀಕಾರ ಬೇರೆ. ಆದರೆ ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ ಈ ಮೂಢ ನಂಬಿಕೆಗಳ ವಿರುದ್ಧ, ನನ್ನ ಪಾದವನ್ನು ತಾವು ಒತ್ತುತ್ತೀರಿ ಎಂದು ಕಾಣುತ್ತದೆ. ಬೆನ್ನಿಹಿನ್ ಅಂತಹವನು ಇದ್ದರೂ ಇನ್ನೂ ಮೂಢನಂಬಿಕೆಗಳನ್ನು ಮಾಡಿ ಅನೇಕ ಅಪರಾಧಗಳನ್ನು ಮಾಡತಕ್ಕಂಥ ಜನ ಇದ್ದಾರೆ. ಮೂಢನಂಬಿಕೆಗಳ ವಿರುದ್ಧ ಇಂತಹ ವ್ಯಕ್ತಿಗಳ ವಿರುದ್ಧ, ಇಂತಹ ಶೋಷಣೆ ವಿರುದ್ಧ ಇದರ ಬಗ್ಗೆ ಅವರು ಯಾರೇ ಇರಬಹುದು, ಯಾವ ಮತದವರೇ ಇರಬಹುದು ಕೊನೆಗೆ ಮಠಾಧಿಪತಿಗಳೇ ಇರಬಹುದು ಬೇರೆ ಯಾರೇ ಇರಬಹುದು ಜೋತಿಷಿಗಳೇ ಇರಬಹುದು, ಇವರೆಲ್ಲರ ಬಗ್ಗೆ ನಾವು ಒಂದು ಪ್ರಾಮಾಣಕವಾದ ಚಿಂತನೆ ನಾವು ನೀವು ಮಾಡಲಿಲ್ಲ ಅಂತ ಅಂದರೆ ಈ ದೇಶಕ್ಕೆ ನಿಜವಾಗಿಯೂ ಅಪಾಯ ಇದೆ. ಅದರ ಬಗ್ಗೆ ನಾನು ಬಹಳ ಪ್ರಾಮಾಣಿಕವಾಗಿ ಒಂದೆರಡು ಮಾತು ತಮಗೆ ಹೇಳುತ್ತಿದ್ದೇನೆ. ಬಿನ್ನಿಹಿನ್ ಬಂದಿದ್ದಕ್ಕೋಸ್ಕರ ನಾವು ಇಷ್ಟು ಅಬ್ಬರ ಮಾಡಿಕೊಂಡು ಏನು ರಾಜ್ಯದಲ್ಲಿ ಇಷ್ಟೆಲ್ಲಾ ಮಾಡಬೇಕಾಗಿರಲಿಲ್ಲ. ಬಂದಿದ್ದರೆ ಇಷ್ಟು ಆಗುತ್ತಿರಲಿಲ್ಲ ಅಲ್ಲಿ ಜನ ಸೇರುತ್ತಿರಲಿಲ್ಲ. ನಾವು ಕೂಗಿ ಗದ್ದಲ ಮಾಡಿ ಹೋರಾಟ ಮಾಡಿದ್ದಕ್ಕೆ ಇಷ್ಟೆಲ್ಲಾ ಆಯಿತು, ನಮ್ಮ ಧರ್ಮಕ್ಕೂ ಅವರು ಹೇಳತಕ್ಕಂಥ ಧರ್ಮಕ್ಕೂ ಬಹಳ ಇತಿಹಸ ಇದೆ. ಅವರು ಹೇಳತಕ್ಕಂಥಾದ್ದಕ್ಕೆ ಅವರ ಇತಿಹಾಸ ಇದೆ. ನಾವು ಏಕೆ ಇದರ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿತ್ತು? ಆಬರೆ ಅಲ್ಲ ನಡೆದಂತಹ ವ್ಯವಸ್ಥೆ ಅಲ್ಲಿ ಆದಂತಹ ಮೂಢನಂಬಿಕೆಗಳ ಪರಿಸ್ಥಿತಿ ಇದು ನಿಜಕ್ಕೂ ಅತ್ಯಂತ ಅಪಾಯಕಾರಿ ಬೆಳವಣಿಗೆ ಇದನ್ನು ಹೋಗಲಾಡಿಸುವುದಕ್ಕೆ ನಾವೆಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು, ಮಾನ್ಯ ಉಪ ಮುಖ್ಯಮಂತ್ರಿ ಒಂದು ಮಾತು ಹೇಳಿದರು ಮೈಸೂರಿನಲ್ಲಿ, ಅದನ್ನು ನಾನು ಒಪ್ಪಿದೆ. ನಾನು ಹಿಂದೂ ಇಲ್ಲ ಮುಂದೂ ಇಲ್ಲ ಅಂತ. ನಾವೂ ಅಷ್ಟೆ. ನನಗೂ ಅನೇಕರು ಬನ್ನಿ ಎಂದು ಹೇಳಿದರು, ಏನು ನೋಡುವುದು ಇದೆ? ಏಕೆ ಹೋಗಬೇಕು ಅಲ್ಲಿಗೆ? ಆ ಕಡೆಗೂ ಹೋಗಲಿಲ್ಲ ಈ ಕಡೆ ಮಠಾಧಿಪತಿಗಳ ಮೆರವಣಿಗೆಗೂ ಹೋಗಲಿಲ್ಲ ಬೇಕಾಗಿಲ್ಲ ನಮಗೆ ಆ ಪ್ರಶ್ನೆ ಬೇಕಾಗಿಲ್ಲ, ಅದಕ್ಕೆ ಹೊಸ ಇತಿಹಾಸ ಅದೇ ಬೇರೆ. ಅದಕ್ಕೆ ನಾನು ಒಂದು ಹೇಳುತ್ತೇನೆ ಸುಮ್ಮನೆ ಇದೊಂದು ಹಾಸ್ಯ

ಎಂದು ತಾವು ಅಂತೀರಿ. ಅದು ನಿಜ. ಈಗ ನಮ್ಮಲ್ಲಿ ಪಕ್ಷಾಂತರ ಆಗುತ್ತಿರುತ್ತಾರೆ. ಏನು ಪ್ರತಿವರ್ಷ ಪಕ್ಷಾಂತರಿಗಳು. ಪ್ರತಿ ವರ್ಷ ಈ ಪಕ್ಷ ಆ ಪಕ್ಷ ಬಿಟ್ಟು ಹೋಗುತ್ತಿರುತ್ತಾರೆ. ಅದನ್ನು ಬೆನ್ನಿಹಿನ್‌ನಿಲ್ಲಿಸಲಿ. ಮಾಡಲಿ ಸಾಧ್ಯವಾದರೆ ಮಾಡಲಿ, ಪಕ್ಷಾಂತರ ನಿಲ್ಲಿಸಲಿ. ಮಾನ್ಯ ಸಿದ್ಧರಾಮಯ್ಯನವರೇ, ಪಕ್ಷಾಂತರ ವರ್ಷ ವರ್ಷ ಮಾಡುತ್ತಿರುತ್ತಾರಲ್ಲಾ ಅದಕ್ಕೆ ಏನಾದರೂ ಬಂದು ಅವರು ಮಾಡಲಿ. ಅದು ಆಗುವುದಿಲ್ಲ. ಅದಕ್ಕೆ ನನಗನ್ನಿಸುತ್ತದೆ ತಮಗೆ ನಾನು ಹೇಳುತ್ತಿದ್ದೇನೆ ಮೂಢನಂಬಿಕೆಗಳ ವಿರುದ್ಧ ಇಂತಹ ಶೋಷಣೆಗಳ ವಿರುದ್ಧ ಸಮರವನ್ನೇ ನಾವೆಲ್ಲರೂ ಇದರ ವ್ಯವಸ್ಥೆಯಲ್ಲಿರತಕ್ಕಂಥ ನಾವೆಲ್ಲರೂ ಸಾರಬೇಕಾಗುತ್ತದೆ ಎಂದು ಪ್ರಕಾಶ್‌ರವರಿಗೂ ಹೇಳುತ್ತೇನೆ ಮಾನ್ಯ ಹೆಚ್.ಕೆ. ಪಾಟೀಲರಿಗೂ ಹೇಳುತ್ತೇನೆ ಮಾನ್ಯ ಸಿದ್ಧರಾಮಯ್ಯನವರಿಗೂ ಹೇಳುತ್ತೇನೆ. ಒಟ್ಟಿಗೆ ಬರೋಣ. ನಾನಂತೂ ತಯಾರಾಗಿದ್ದೇನೆ. ಮಾನ್ಯ ಸಿದ್ಧರಾಮಯ್ಯನವರೂ ಇದಕ್ಕೆ ತಯಾರಾಗಿದ್ದಾರೆ. ಈ ಮೂಢನಂಬಿಕೆಗಳ ವಿರುದ್ಧ ಟೀಮ್ ಮಾಡಿಕೊಳ್ಳೋಣ....

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಈ ಆಂದೋಳನವನ್ನು ನೀವೇ ಪ್ರಾರಂಭ ಮಾಡಿ. ಎಲ್ಲಾ ಸೇರಿಕೊಳ್ಳುತ್ತಾರೆ ಅದಕ್ಕೆ. ಈ ಮೌಢ್ಯದ ವಿರುದ್ಧ ಅಂದೋಳನ.

ಶ್ರೀ ವಾಟಾಳ್ ನಾಗರಾಜ್ : ಮಾಡಲೇಬೇಕು. ಇದಕ್ಕೆ ನಾವೆಲ್ಲರೂ ಸೇರಿ ಮಾಡೋಣ. ಜನರನ್ನು ನಾವು ಈ ಮೌಢ್ಯದ ಹಾದಿಗೆ ತಿರುಗಿಸುವುದು ಬೇಡ. ಎಲ್ಲರೂ ಸೇರೋಣ. ಹೊಂದಾಣಿಕೆ ಇರತಕ್ಕಂಥವರು ಎಲ್ಲರೂ ಸೇರೋಣ. ಅದಕ್ಕೋಸ್ಕರವಾಗಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದರೆ ಅವರು ಕೊಟ್ಟು ಬಿಡುತ್ತಾರಾ, ಅಷ್ಟು ಸುಲಭವಾಗಿ ಕೊಡುವುದಕ್ಕೆ ಬಂದಿರುವುದು ಅವರು? ಎಲ್ಲಾದರೂ ಉಂಟೇ? ಏನು ಮಾನ್ಯ ಯಡಿಯೂರಪ್ಪನವರು ನೀವು ಆಕಾಶ ಭೂಮಿವರೆಗೆ ಹಾರಾಡಿದರೂ ಕೊಡುವುದಿಲ್ಲ ಅವರು. ಕೊಡುವುದಿಲ್ಲ ಏಕೆ ಕೊಡುತ್ತಾರೆ? ಕೊಡಬೇಕಾಗಿಲ್ಲ. ನಾನು ಸಹ ಅವರು ಕೊಡಬಾರದು ಅಂತ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : (ಬಾಗೇಪಲ್ಲಿ ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ಇದು ಭಾರಿ ದುರ್ದೈವದ ಸಂಗತಿ. ನಮ್ಮ ಸದನದ ಸಮಯವನ್ನು ಯಾರೋ ಒಬ್ಬ ಬೂದಿ ಬಾಬನ ಬಗ್ಗೆ ಚರ್ಚೆ ಮಾಡಲಿಕ್ಕೆ ವ್ಯಯ ಮಾಡತಕ್ಕಂಥಾದ್ದು ನಿಜವಾಗಿಯೂ ಕರ್ನಾಟಕ ರಾಜ್ಯದ ದುರ್ದೈವ ಇದು. ಸದನದಲ್ಲಿ ಚರ್ಚೆಗೆ ಇಷ್ಟು ಸಮಯ ಅದಕ್ಕೆ ಹಾಳು ಮಾಡುತ್ತಿರತಕ್ಕಂಥಾದ್ದು. ಬೇಕಾದಷ್ಟು ಸಮಸ್ಯೆಗಳು ನಮ್ಮನ್ನು ಕಾಡುತ್ತಿದ್ದರಲೂ ಅದನ್ನು ಬಿಟ್ಟು ಯಾವನೋ ಒಬ್ಬ ಬೂದಿಬಾಬ ಅವನ, ಅಂತಹ ಬಾಬಗಳು ಈ ದೇಶದಲ್ಲಿ ಲಕ್ಷಾಂತರ ಜನ ಇದ್ದಾರೆ. ಆ ಬೂದಿಬಾಬಗಳೆಲ್ಲಾ ಈ ದೇಶದಲ್ಲಿ ಯಾರ ಜೊತೆಯಲ್ಲಿ ಇದ್ದಾರೆ ಎನ್ನಲಕ್ಕಂಥಾದ್ದು ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿದೆ. ಯಾರ ಜೊತೆಯಲ್ಲಿದ್ದಾರೆ ಎಂದು ಅವರು ಹೇಳಲಿ ಯಾರು ಬೂದಿಬಾಬಗಳನ್ನು ಜೊತೆಯಲ್ಲಿಟ್ಟುಕೊಂಡಿದ್ದಾರೆ ಅವರೇ ಇವತ್ತು ಈ ಬೂದಿಬಾಬಗಳನ್ನು ವಿರೋಧ ಮಾಡುವುದು ಇದು ಇನ್ನೂ ವಿಪರ್ಯಾಸದ ಸಂಗತಿ ಇದು. ನಮ್ಮ ದೇಶದ ಪ್ರಧಾನ ಮಂತ್ರಿಗಳು, ಗೃಹ ಮಂತ್ರಿಗಳು ಬಾಬಗಳ ಕಾಲಿಗೆ ಬಿದ್ದಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಅವತ್ತು ಯಾರಿಗೂ ಅವಮಾನ ಅಂತ ಅನಿಸಲಿಲ್ಲ. ಬಿಲ್ ಕ್ಲಿಂಟನ್ ಭಾರತ ದೇಶಕ್ಕೆ ಬಂದಾಗ ಇಡೀ ಡೆಲ್ಲಿ ಅಡ್ಮಿನಿಸ್ಟ್ರೇಶನ್ ಅನ್ನು ಅಮೇರಿಕಾ ಸೈನ್ಯಕ್ಕೆ ಪೊಲೀಸ್‌ನವರಿಗೆ ಕೊಟ್ಟಾಗ ಇವರಿಗೆ ಸ್ವಾಭಿಮಾನ ಅಡ್ಡ ಬರಲಿಲ್ಲ ಇವತ್ತು ಯಾವನೋ ಒಬ್ಬ ಬಂದ ಎಂದು ಹೇಳಿ, ಇವತ್ತು ನಾನು ಹೇಳುತ್ತೇನೆ ಮಾನ್ಯ ಅಧ್ಯಕ್ಷರೇ,

ಈ ದೇಶದಲ್ಲಿ ಬೌದ್ಧ ಧರ್ಮ ಹುಟ್ಟಿತು. ಹಿಂದೂ ಧರ್ಮದ ವಿರುದ್ಧವೇ ಸಿಡಿದೆದ್ದಿದ್ದು ಬೌದ್ಧ, ಧರ್ಮ ಉಳಿಯಲಿಲ್ಲ ಇಲ್ಲಿ. ಜೈನ್ ಧರ್ಮ ಬಂತು ಉಳಿಯಲಿಲ್ಲ. ಹಿಂದೂ ಧರ್ಮ ಯಾರೋ ಅಂದುಕೊಂಡಿರುವಷ್ಟು ದುರ್ಬಲ ಅಲ್ಲ. ಅದರ ರಕ್ಷಣೆಯನ್ನು ಯಾರೂ ಯಾರಿಂದಲೂ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಹಿಂದೂ ಧರ್ಮಕ್ಕೆ ಆ ಶಕ್ತಿ ಇದೆ. ಏಕೆಂದರೆ ಹಿಂದೂ ಧರ್ಮದ ಉದ್ದೇಶ ಬಹಳ ವಿಶಾಲವಾದುದ್ದಾದ್ದರಿಂದ ಎಲ್ಲವನ್ನೂ ಆರಗಿಸಿಕೊಳ್ಳತಕ್ಕಂಥ ಶಕ್ತಿ ಅದಕ್ಕೆ ಇದೆ. ಯಾರೋ ಅಲೆಗ್ಸಾಂಡರೋ, ಪಲೆಗ್ಸಾಂಡರೋ ಬೆನ್ನಿಹಿನ್ ಬಂದುಬಿಟ್ಟು ಹಿಂದೂ ಧರ್ಮವನ್ನು ನುಂಗುತ್ತಾರೆಂದು ಯಾರಾದರೂ ಹೇಳಿದರೆ ಅದು ನಿಜವಾಗಿಯೂ ಹಾಸ್ಯಾಸ್ಪದವಾದಂತಹ ವಿಚಾರ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಹಿಂದೂ ಧರ್ಮ ಬಹಳ ಬಲಶಾಲಿಯಾಗಿದೆ ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವರು ಮೊದಲು ಪ್ರಿಯಾಂಬಲ್‌ನಲ್ಲಿ ಹೇಳುವಾಗ ಬೌದ್ಧ ಧರ್ಮ ಬಂತು ಅದು ಉಳಿಯಲಿಲ್ಲ. ಜೈನ್ ಧರ್ಮ ಬಂತು. ಅದು ಉಳಿಯಲಿಲ್ಲ ಅಂದರೆ ಅದರ ವಿರುದ್ಧವಾಗಿ ನೀವು ನಿಲುವು ತೆಗೆದುಕೊಂಡಂತೆಯೇ? ಅಷ್ಟೇ ಅವು ಈ ದೇಶಿಯ ಧರ್ಮಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಅರ್ಥ ಬೇರೆ. ಹೌದು ಈ ದೇಶದಲ್ಲಿಯೇ ಹುಟ್ಟಿದ್ದು ಅವು. ಈ ದೇಶಿಯ ಧರ್ಮಗಳೇ ಅವು. ಆದರೆ ಬೌದ್ಧ ಧರ್ಮ ಪ್ರಾರಂಭವಾಗಿದ್ದು ಹಿಂದೂ ಧರ್ಮದಲ್ಲಿರತಕ್ಕಂಥ ಮೌಢ್ಯದ ವಿರುದ್ಧ ಸಿಡಿದೆದ್ದು. ಹೌದೋ ಇಲ್ಲವೋ. ಆದರೂ ಕೂಡ ಬೌದ್ಧ ಧರ್ಮ....

ಶ್ರೀ ಎಂ.ಪಿ. ಪ್ರಕಾಶ್ : ಹಿಂದೂ ಧರ್ಮ ಬಹಳ ಬಲಶಾಲಿ ಎಂದು ಹೇಳಿದೆ. ಹಿಂದೂ ಧರ್ಮದ ದೌರ್ಬಲ್ಯಗಳಲ್ಲಿ ಅದೂ ಒಂದು ಎಂದು ಹೇಳಿ ಪ್ರಸ್ತಾಪ ಮಾಡಬಹುದು...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ನನ್ನ ಅಭಿಪ್ರಾಯ. ಇದು ನಿಮ್ಮ ಅಭಿಪ್ರಾಯ. ನಾನು ಯಾವುದೊ ಪಂಥದ ಬಗ್ಗೆ ಹೇಳುತ್ತಿಲ್ಲ. ಹಿಂದೂ ಧರ್ಮವನ್ನು ಯಾರೂ ನಾಶ ಮಾಡಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ವಿಚಾರವನ್ನಷ್ಟೇ ನಾನು ಹೇಳಿದ್ದು. ಅದಕ್ಕೆ ಮೀರಿ ಅರ್ಥೈಸುವಂತಹ ಅವಶ್ಯಕತೆ ಇಲ್ಲ. ಇವತ್ತು ಮಾಧುಸ್ವಾಮಿಯವರು ಹೇಳಿದ್ದನ್ನು ನಾನು ಒಪ್ಪುತ್ತೇನೆ ಸರ್ಕಾರ ಆಡಳಿತಾತ್ಮಕವಾಗಿ ಕೆಲವು ತಪ್ಪುಗಳನ್ನು ಮಾಡಿದೆ ಮಾಡಬಾರದಿತ್ತು. ಈ ದೇಶದಲ್ಲಿ ಬೂದಿ ಬಾಬುಗಳನ್ನು ಇವತ್ತು ಮಾತ್ರವಲ್ಲ, ಈ ದೇಶದ ಪರಂಪರೆಯೇ ಹಾಗೆ, ಈ ದೇಶದ ಮೌಢ್ಯತೆಯನ್ನು ಎಲ್ಲಾ ಖಾಯಿಲೆ ವಾಸಿ ಮಾಡುವುದಕ್ಕೆ ಪರಮಾತ್ಮನಿದ್ದಾನೆಂದು ನಂಬಿಕೊಂಡೇ ಬಂದಿದ್ದೇವೆ, ಇವತ್ತು ನಂಬುತ್ತಿದ್ದೇವೆ, ಇಷ್ಟೊಂದು ವೈಜ್ಞಾನಿಕ ಯುಗದಲ್ಲೂ ನಮ್ಮ ದೇಶದಲ್ಲಿ ತಾಯಿತ ಕಟ್ಟಿಸುತ್ತಾರೆ, ಮಂತ್ರ ಹಾಕಿಸುತ್ತಾರೆ, ನಿಂಬೆ ಹಣ್ಣು ಮಂತ್ರಿಸುತ್ತಾರೆ ಯಾರೂ ಅದನ್ನು ವಿರೋಧ ಮಾಡಲಿಲ್ಲ. ಆದುದರಿಂದ ಈ ವಿಚಾರವನ್ನು ಇವತ್ತು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸದನದ ಸಮಯವನ್ನು ನಾವು ಹಾಳು ಮಾಡುತ್ತಿದ್ದೇವಲ್ಲಾ, ಇದನ್ನು ನಮ್ಮ ಕರ್ನಾಟಕದ ಜನತೆ ಕ್ಷಮಿಸುವುದಕ್ಕೆ ಸಾಧ್ಯವಿಲ್ಲ.

ಇನ್ನು ಎರಡನೆ ವಿಚಾರ, ಆತನಿಗೆ ಪ್ರಚಾರ ಕೊಡುವ ವಿಚಾರದಲ್ಲಿ, ಜಕ್ಕೂರು ವಿಮಾನ ನಿಲ್ದಾಣವನ್ನು ಕೊಟ್ಟಿರುವುದರಲ್ಲಿ ನಮ್ಮದೂ ವಿರೋಧವಿದೆ. ಧರ್ಮ ಪ್ರಚಾರ ಮಾಡುವುದಕ್ಕೆ ಸಂವಿಧಾನಬದ್ಧವಾಗಿ ಎಲ್ಲರಿಗೂ ಹಕ್ಕಿದೆ, ಆದರೆ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಒಂದು ಜಾಗವನ್ನು ಏನು ಕೊಡಲಾಗಿದೆ, ಅದು ಅಕ್ಷಮ್ಯ ಅಪರಾಧ, ಕಂಠೀರವ ಸ್ಟೇಡಿಯಂ ಕೊಡಬಹುದಾಗಿತ್ತು,

ಬೇರೆ ಬೇರೆ ಜಾಗಗಳಿವೆ ಅವುಗಳನ್ನು ಕೊಡಬಹುದಾಗಿತ್ತು, ಅದನ್ನೇ ಕೊಡುವಂಥ ಅವಶ್ಯಕತೆ ಇಲ್ಲ.

ಇನ್ನೊಂದು ವಿಚಾರವೇನೆಂದರೆ, ನೀವು ಜಾತ್ಯಾತೀತ ಮೌಲ್ಯಗಳನ್ನು ರಕ್ಷಣೆ ಮಾಡಬೇಕು, ಆದರೆ ನಮ್ಮ ದೇಶದ ರಾಜಕಾರಣಿಗಳಲ್ಲಿ ಏನಾಗಿದೆ ಎಂದರೆ, ಜಾತ್ಯಾತೀತತೆ ಎಂದರೆ, ಚರ್ಚ್‌ಗೆ ಹೋಗತಕ್ಕಂಥದ್ದು, ಗುಡಿಗೆ ಹೋಗತಕ್ಕಂಥದ್ದು, ಮಸೀದಿಗೆ ಹೋಗತಕ್ಕಂಥದ್ದು, ಈ ಮೂರು ಕಡೆಗೆ ಹೋಗಿಬಿಟ್ಟರೆ ನಾವು ಜಾತ್ಯಾತೀತರು ಎಂದು ಲೆಕ್ಕ. ಆ ಮೂರು ಕಡೆ ಹೋಗುವಂಥದ್ದು ಜಾತ್ಯಾತೀತರು ಎನ್ನುವ ಭಾವನೆ ಇದೆಯಲ್ಲಾ, ಅದು ಸಂಪೂರ್ಣವಾಗಿ ಅವೈಜ್ಞಾನಿಕವಾದದ್ದು. ಧರ್ಮ ವೈಯಕ್ತಿಕ ವಿಚಾರ, ಅದನ್ನು ಸಾರ್ವಜನಿಕ ಜೀವನದಲ್ಲಿ, ರಾಜಕಾರಣದಲ್ಲಿ ತರತಕ್ಕಂಥದ್ದು ಮಹಾ ಅಪರಾಧ, ಅದೇ ಈ ದೇಶಲ್ಲಿ ಇವತ್ತು ಆಗಿರತಕ್ಕಂಥದ್ದು. ಇದರಿಂದ ಇವತ್ತು ಏನಾಗುತ್ತಿದೆ ಎಂದರೆ, ಮನುಷ್ಯನ ಬದುಕು ಮತ್ತು ಭಾವನೆಗಳ ವಿರುದ್ಧ ಇವರು ಸಂಘರ್ಷವನ್ನು ಏರ್ಪಡಿಸಿದ್ದಾರೆ. ಮನುಷ್ಯನ ಬದುಕಿನ ಬಗ್ಗೆ ಆಲೋಚನೆ ಮಾಡುವುದು ಬಿಟ್ಟು ಭಾವನೆಗಳ ಬಗ್ಗೆ ಆಲೋಚನೆ ಮಾಡುವ ಸ್ಥಿತಿಗೆ ಇವತ್ತು ಇಳಿದು, ಆ ಭಾವನೆಗಳನ್ನು ಕೆರಳಿಸಿ, ಬದುಕು ಮತ್ತು ಭಾವನೆಗಳನ್ನು ಸಂಘರ್ಷಕ್ಕೆ ತೆಗೆದುಕೊಂಡು ಬಂದು, ಇಡೀ ಮನುಷ್ಯನ ಬದುಕನ್ನು ಹಾಳು ಮಾಡುತ್ತಿದ್ದೇವಲ್ಲಾ, ಅದು ಜೀವವಿರೋಧಿ ಕೃತ್ಯ. ಜನವಿರೋಧಿ ಕೃತ್ಯ. ನಾವು ಮನುಷ್ಯನ ಬದುಕಿನ ಬಗ್ಗೆ ಮಾತನಾಡಬೇಕೇ ಹೊರತು, ಮನುಷ್ಯನ ಬದುಕಿನ ಬಗ್ಗೆ ಚಿಂತನೆ ಮಾಡಬೇಕೇ ಹೊರತು, ಮನುಷ್ಯನ ಭಾವನೆಗಳ ಬಗ್ಗೆ ಅಲ್ಲ ಚಿಂತನೆ ಮಾಡಬೇಕಾಗಿರುವುದು. ಆ ಭಾವನೆಗಳ ಬಗ್ಗೆ ಚಿಂತನೆ ಮಾಡಿದ ಪರಿಣಾಮ ಮೊನ್ನೆ ಬೆಂಗಳೂರಿನಲ್ಲಿ ಏನಾಯಿತು? 134 ಕೋಟಿ ರೂಪಾಯಿಗಳ ನಷ್ಟವಾಯಿತು, ಅದು ಯಾರ ಆಸ್ತಿ, ಅದು ಸಾರ್ವಜನಿಕ ಆಸ್ತಿ, ಅದಕ್ಕೆ ಜವಾಬ್ದಾರರು ಯಾರು? ಅದನ್ನು ಕಟ್ಟಿಕೊಡುವವರು ಯಾರು? ಅದಕ್ಕೋಸ್ಕರ, ಇಂತಹ ಭಾವನೆಗಳನ್ನು ಕೆರಳಿಸಿ ಜನರ ಜೀವನದ ಜೊತೆ ಚಲ್ಲಾಟವಾಡತಕ್ಕಂಥವರನ್ನು ಎಂದಿಗೂ ಕ್ಷಮಿಸಲು ಸಾಧ್ಯವಿಲ್ಲ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವಂತಹ ಅವಶ್ಯಕತೆ ಇಲ್ಲ, ಅದಕ್ಕೆ ಅವರು ಏತಕ್ಕೆ ರಾಜೀನಾಮೆ ಕೊಡಬೇಕು? ಆದರೆ ಮುಖ್ಯಮಂತ್ರಿಗಳು ಅವರ ಆತ್ಮಕ್ಕೆ ಒಂದು ಪ್ರಶ್ನೆಯನ್ನು ಹಾಕಿಕೊಳ್ಳಬಾಕಾಗುತ್ತದೆ, ಬೆನ್ನಿಹಿನ್ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳಾಗಿ ಹೋಗಿದ್ದರೆ, ಧರ್ಮಸಿಂಗ್ ಆಗಿ ಹೋಗಿದ್ದರೆ? ಮುಖ್ಯಮಂತ್ರಿಗಳಾಗಿ ಆ ಕಾರ್ಯಕ್ರಮಕ್ಕೆ ಹೋಗಿದ್ದರೆ ಅಕ್ಷಮ್ಯ ಅಪರಾಧವಾಗುತ್ತದೆ. ನೀವು ಮೌಢ್ಯತೆಯನ್ನು ಬೆಂಬಲಿಸಿದಂತಾಗುತ್ತದೆ. ನಾನು ಸಿದ್ಧರಾಮಯ್ಯನವರನ್ನು ಖಂಡಿತವಾಗಿ ಪ್ರಶಂಸೆ ಮಾಡುತ್ತೇನೆ, ಮಾನ್ಯ ಸಿದ್ಧರಾಮಯ್ಯನವರು ಒಬ್ಬರು ಮಾತ್ರವೇ ಅಲ್ಲಿಗೆ ಹೋಗದೆ ಇರುವಂತಹವರು ನೀವು ಮುಖ್ಯಮಂತ್ರಿಯಾಗಿ ಅಲ್ಲಿಗೆ ಹೋಗಬಾರದಿತ್ತು, ಏಕೆಂದರೆ ನೀವು ಮೌಢ್ಯತೆಯನ್ನು ಬೆಂಬಲಿಸಿದಂತಾಗುತ್ತದೆ, ಧರ್ಮ ಪ್ರಚಾರವನ್ನು ಅವರು ಮಾಡಿಕೊಂಡು ಹೋಗಲಿ ಅವರ ಇಷ್ಟ ಅದಕ್ಕೆ ನಾವೇನೂ ಅಭ್ಯಂತರ ಮಾಡುವ ಅವಶ್ಯಕತೆ ಇಲ್ಲ. ಆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಯವರು ಹೋಗತಕ್ಕಂತಹ ಕಾರಣಕ್ಕೆ ಇವತ್ತು, ಇಡೀ ದೇಶದಲ್ಲಿ ಸಾಮಾನ್ಯ ಜನರು ಏನು ಮಾತನಾಡುತ್ತಾರೆ? ಮುಖ್ಯಮಂತ್ರಿಯಂತಹವರೇ ನಂಬಿ ಅಲ್ಲಿಗೆ ಹೋದಾಗ, ನಾನೊಬ್ಬ ಮುಗ್ಧ ಅಲ್ಲಿಗೆ ಏತಕ್ಕೆ ಹೋಗಬಾರದೆಂದು ಪ್ರಶ್ನೆಯನ್ನು ಅವನಷ್ಟಕ್ಕೆ ಅವನೇ ಹಾಕಿಕೊಳ್ಳುತ್ತಾನೆ. ಒಬ್ಬ ಪ್ರಧಾನಮಂತ್ರಿ, ಒಬ್ಬ ಗೃಹಮಂತ್ರಿ ಹೋಗಿ ಯಾರ್ಯಾರೋ ಕಾಲಿಗೆ ಬೀಳುವಾಗ ಒಬ್ಬ ಸಾಮಾನ್ಯ ಮನುಷ್ಯ, ನಾನು

ಕಾಲಿಗೆ ಬಿದ್ದರೆ ಏನು ತಪ್ಪೆಂದು ಆಲೋಚನೆ ಮಾಡುತ್ತಾನೆ. ಹಾಗಾಗಿ ನಾವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು, ಮೌಢ್ಯತೆಗೆ, ಅಂಧತ್ವಕ್ಕೆ, ಭಾವನೆಗಳ ಜೊತೆ ಚೆಲ್ಲಾಟ ಆಡುವುದಕ್ಕೆ ಅವಕಾಶ ಮಾಡಿಕೊಡಬಾರದು, ಅದನ್ನು ಯಾರು ಮಾಡಿದರೂ ತಪ್ಪಾಗುತ್ತದೆ, ಅಂತಹ ವಿಚಾರಗಳನ್ನು ಸದನದಲ್ಲಿ ಚರ್ಚೆ ಮಾಡಿ ಲಕ್ಷಾಂತರ ರೂಪಾಯಿಗಳ ಸಾರ್ವಜನಿಕರ ಹಣವನ್ನು ಪೋಲು ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬಾರದೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಸನ್ಮಾನ್ಯ ಸಭಾಧ್ಯಕ್ಷರೆ, ಈ ವಿಷಯವನ್ನು ಈ ಸದನದಲ್ಲಿ ಚರ್ಚೆ ಮಾಡುವುದೇ ತಪ್ಪೆನ್ನುವುದು ನನ್ನ ಅಭಿಪ್ರಾಯ, we should not hurt anybody's feeling, ಯಾರ ಮನಸ್ಸಿಗೂ ನೋವು ಮಾಡಬಾರದು. ಬೆನ್ನಿಹಿನ್ ಬಂದರು, ಹೋದರು ಅದು ನಮಗೆ ಮುಖ್ಯವಲ್ಲ, ಬಂದರು ಪ್ರೇಯರ್ ಮಾಡಿದರು, ಅವರು ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳನ್ನು ಆ ಕಾರ್ಯಕ್ರಮಕ್ಕೆ ಬನ್ನಿ ಎಂದು ಮನವಿ ಮಾಡಿದರು. ಇದನ್ನು ಚುನಾವಣೆಯ ಸಮಯದಲ್ಲಿ ಬಂದಿದ್ದರೆ ಯಾರೂ ಮಾತನಾಡುವುದಿಲ್ಲ, ಏಕೆಂದರೆ ಕ್ರಿಶ್ಚಿಯನ್ಸ್ ಓಟು ಬರಬೇಕಾಗುತ್ತದೆ. ಈಗ ಚುನಾವಣೆ ಇಲ್ಲ ಎಲ್ಲರೂ ಆ ಬಗ್ಗೆ ಮಾತನಾಡಬಹುದು. ಅವರು ಬರೀ ಮಿರಾಕಲ್ ಮಾಡಿದರೋ, ಬರೀ ಕ್ರಿಶ್ಚಿಯನ್ಸ್ ಬಗ್ಗೆ ಮಾತನಾಡಿದರೂ ಅದು ಮಾತ್ರವಲ್ಲ, ನಾವು ಹಿಂದೂಗಳು ದೇವರನ್ನೇ ಏಮಾರಿಸುತ್ತೇವೆ. ಒಬ್ಬನು ತಿರುಪತಿಗೆ ಹೋಗುತ್ತಾನೆ, ಸ್ವಾಮಿ, ನನ್ನ ಕಿಡ್ನಿ ಫೆಲ್ಯೂರ್ ಆಗಿಬಿಟ್ಟಿದೆ ನಾನು ಚೆನ್ನಾಗಿ ಆಗಿಬಿಟ್ಟರೆ, ನಾನು ಬಂದು ನಿಮ್ಮನ್ನು ನೋಡುತ್ತೇನೆಂದು ಅರಿಕೆ ಮಾಡಿಕೊಳ್ಳುತ್ತಾನೆ. ಅವನು ಬಂದೇನು ನೋಡಿದ್ದಾನೆ, ಕಿಡ್ನಿ ತೆಗೆದುಕೊಟ್ಟಿದಾನಾ, ಇಲ್ಲ, ಹತ್ತು ಫಿಂಗರ್ಸ್ ಇದೆ, ಒಂದು ದೇವರಿಗೆ ಕಟ್ ಮಾಡಿ ಕೊಟ್ಟಿದ್ದಾನಾ, ಇಲ್ಲ, ಮನುಷ್ಯ ಬಹಳ ಬುದ್ಧಿಶಾಲಿ. ಯಾವುದು ನೋವಿಲ್ಲ ಅದನ್ನು ಮಾತ್ರ ಕೊಟ್ಟುಬಿಟ್ಟು ಬರುತ್ತಾನೆ, ಕೂದಲು ತೆಗೆದು ದೇವರಿಗೆ ಕೊಡುತ್ತಾನೆ, ಮತ್ತೆ ಇದು ಬರುತ್ತದೆ ಆದರೆ ಕೈ ತೆಗೆದುಕೊಟ್ಟರೆ ಮತ್ತೆ ಬರುವುದಿಲ್ಲ, ಕಾಲು ಕಟ್ ಮಾಡಿಕೊಟ್ಟರೆ ಬರುವುದಿಲ್ಲ, ಕೂದಲು ತೆಗೆದರೆ ನೋವು ಇರುವುದಿಲ್ಲ, ಮತ್ತೆ ಅದು ಮೂರು ತಿಂಗಳಿನಲ್ಲಿ ಬರುತ್ತದೆ, ಅಂತಹ ಮಹಾನುಭಾವರು, that kind of human beings are there. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಲಿಲ್ಲವೆಂದರೆ, religious community ಅವರು ನಮ್ಮ ರಿಲಿಜಿಯನ್‌ಗೆ, ಕಮ್ಯುನಿಟಿಗೆ ವಿರೋಧಿ ಎಂದು ಹೇಳುತ್ತಾರೆ, ಹೋದರೆ ಇವರು ಹೋಗಿದ್ದು ತಪ್ಪೆಂದು ಹೇಳುತ್ತಾರೆ. ತಮಗೆ ಒಂದು ಉದಾಹರಣೆ ಹೇಳುತ್ತೇನೆ, ಗ್ರೀಕ್‌ನಲ್ಲಿ ಸಾಕ್ರೇಟಿಸ್ ಎಂಬ ಒಬ್ಬರಿದ್ದರು. He was giving a big speech. ಅವರ ಮೇಲೆ ಆ ದೇಶದಲ್ಲಿರುವವರೆಲ್ಲಾ ಇವನು ಸರಿ ಇಲ್ಲ, ಸ್ಟೂಡಂಟ್ಸ್‌ಗಳನ್ನೂ, ಯಂಗ್‌ಸ್ಟರ್ಸ್ ಅನ್ನು, ಗರ್ಲ್ಸ್‌ಗಳನ್ನು ಡೈವರ್ಟ್ ಮಾಡುತ್ತಾನೆ, ಇವನು ಊರಿನಲ್ಲೇ ಇರಬಾರದು, ಇವನಿಗೆ ಶಿಕ್ಷೆ ಕೊಡಬೇಕೆಂದು ಡಿಸೈಡ್ ಮಾಡಿಯೇ ಬಿಟ್ಟರು. ಸಾಕ್ರೆಬಿಸ್‌ರನ್ನು ರಾಜನ ಹತ್ತಿರ ಕರೆದುಕೊಂಡು ಹೋದರು, ರಾಜ ಕೇಳಿದರು, ನೀವು ಬಹಳ ಅಪರಾಧ ಮಾಡುತ್ತಿದ್ದೀಯಾ ಎಂದು ಹೇಳಿದ್ದಾರೆ, ನೀವು ತಪ್ಪು ಕೆಲಸ ಮಾಡಿದ್ದಿರಿ, ದೇಶದ್ರೋಹ ಕೆಲಸವನ್ನು ಮಾಡಿದ್ದೀರೆಂದು ಎಲ್ಲಾ ಹೇಳಿದರು, ಸಾಕ್ರೆಟಿಸ್ ಅವರನ್ನು ನಾನೇನು ಮಾಡಿದೆ ಎಂದು ಕೇಳಿದಾಗ, ಇಲ್ಲ ನೀವೆಲ್ಲಾ ಸ್ಟೂಡೆಂಟ್ಸ್ ಅನ್ನು ಡೈವರ್ಟ್ ಮಾಡುತ್ತೀರಿ, ನೀವು ಭಾಷಣ ಮಾಡಿ ಮಕ್ಕಳನ್ನೆಲ್ಲಾ ನಿಮ್ಮ ಕಡೆಗೆ ಸೆಳೆದುಕೊಳ್ಳುತ್ತೀರಿ, ನಿಮ್ಮ ಭಾಷಣದಲ್ಲಿ ಈ ಜನರನ್ನೆಲ್ಲಾ ಡೈವರ್ಟ್ ಮಾಡುತ್ತೀರೆಂದು ಹೇಳಿದರು. ಆ ಮಹಾರಾಜನನ್ನು ಸಾಕ್ರೆಟಿಸ್ ನಾನು ಯಾವ ಭಾಷೆಯಲ್ಲಿ

ಮಾತನಾಡಿದ್ದೇನೆ, ಎಂದು ಕೇಳಿದರು ಅದಕ್ಕೆ ರಾಜ ನೀನು ಗ್ರೀಕ್ ಲಾಂಗ್ವೆಜ್‌ನಲ್ಲಿ ಮಾತನಾಡಿದ್ದೀಯಾ ಎಂದರು, ಸಾಕ್ರೇಟಿಸ್, ಆ ಲಾಂಗ್ವೆಜ್ ತಮಗೂ ಗೊತ್ತಿದೆ ಅಲ್ಲವೇ ಎಂದು ಕೇಳಿದರು, ಅದಕ್ಕೆ ರಾಜ, ಹೌದು ಎಂದು ಹೇಳಿದರು, ಹಾಗಾದರೆ ನೀವೂ ಕೂಡ ಹಾಗೆ ಮಾತನಾಡಿ ಡೈವರ್ಟ್ ಮಾಡಿಕೊಳ್ಳಿ ಎಂದು ಹೇಳಿದರು. ಆ ರೀತಿ ಬಿನ್ನಿಹಿನ್ ಮಾತನಾಡಿದರೆ, ನೀವು ಕೂಡ ಮೈಕ್ ತೆಗೆದುಕೊಳ್ಳಿ ಭಾಷಣ ಮಾಡಿ, ದೇವರು ಬರುತ್ತಾನೆಂದು ಹೇಳಿ, ಬಂದಿಲ್ಲವೆಂದರೆ ಬಿಡಿ. ಅವರಿಗೆ ಜನ ಬರುತ್ತಾರೆಂದರೆ ನಾವೇನು ಮಾಡುವುದಕ್ಕಾಗುತ್ತದೆ ಸ್ವಾಮಿ? ನೀವೇ ಹೇಳಿ? ಜಯೇಂದ್ರ ಸ್ವಾಮಿಗಳು ಪಾಪ ದೊಡ್ಡ ಮನುಷ್ಯರು, Throughout the world everybody knows him. We have no right to talk about that Maham ಬಹಳ ಓದಿರುವವರು, ಗೌರವಾನ್ವಿತರು, ಗೀತಾ ಗೊತ್ತಿದೆ ಎಲ್ಲಾ ಗೊತ್ತಿದೆ, ಅಂತಹವರು ಜೈಲಿನಲ್ಲಿರುವ ಸಂದರ್ಭದಲ್ಲಿ, ಮಾಜಿ ಕೇಂದ್ರ ಮಂತ್ರಿಗಳೆಲ್ಲಾ ಜೈಲಿನಲ್ಲಿ ಹೋಗಿ ಅವರನ್ನು ಹೇಗಿದ್ದಾರೆಂದು ಭೇಟಿ ಮಾಡಿದರು, ತಪ್ಪಾ? ಇಲ್ಲವೇ, ತಮಿಳುನಾಡಿನ ಮುಖ್ಯಮಂತ್ರಿಗಳು, law will take its own course. ಎಂದು ಹೇಳಿದರು. ಅವರ ಮೇಲೆ ಎಷ್ಟು ಅಪರಾಧ, ನೀವು ಹೀಗೆ ಮಾಡಿದ್ದು ತಪ್ಪೆಂದು ಹೇಳುತ್ತಾರೆ, ಅದಕ್ಕೆ ಅವರು ಬಾಯಿಯನ್ನು ತೆಗೆಯಲಿಲ್ಲ. ಆ ರೀತಿಯಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಕೂಡ ಯಾರು ಏನಾದರೂ ಹೇಳಿಕೊಂಡು ಹೋಗಲಿ ಸ್ವಾಮಿ, ತಾವು ಏಕೆ ಆ ಕಾರ್ಯಕ್ರಮಕ್ಕೆ ಹೋದಿರಿ ಎನ್ನುವುದಕ್ಕೆ ಉತ್ತರ ಕೊಡುವ ಅವಶ್ಯಕತೆ ಇಲ್ಲ, ತಾವು ಉತ್ತರ ಕೊಡಲಿಲ್ಲವೆಂದರೆ ಓ..ಯು ಮಾಡುತ್ತಾರೆ? ಅವಶ್ಯಕತೆ ಇಲ್ಲ, ಕೊಡಲೇ ಬಾರದು. ರಾಜೀನಾಮೆ ಕೊಡಿ ಎಂದು ಕೂಗಾಡುತ್ತೇವೆ ಒಂದುವಾರ ಪತ್ರಿಕೆಗಳಲ್ಲಿ ಬರುತ್ತದೆ. ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಸುಬ್ಬಯ್ಯ ಜೆ.ಹೆಚ್. ಪಟೇಲರು, ನೀವು ಪತ್ರಿಕೆಗಳಲ್ಲಿ ಬರೆದುಕೊಂಡೇ ಇರಿ, ಹೌದು ಎಂದು ಹೇಳಿದರೆ ಏನು ಮಾಡುತ್ತೀರಿ ಎಂದು ಒಂದು ಸಲ ಹೇಳಿದ್ದರು. ಆ ರೀತಿಯಾಗಿ ತಾವು ಆ ಬಗ್ಗೆ ಯಾವುದೇ ಚಿಂತನೆಯನ್ನೇ ಮಾಡಬಾರದು, ತಾವು ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲ. ತಾವು ತಮ್ಮ ಜೊತೆ ಉಪಮುಖ್ಯಮಂತ್ರಿಯವರನ್ನು ಕರೆದುಕೊಂಡು ಹೋಗಿದ್ದರೆ ಇದು ದೊಡ್ಡ ಚರ್ಚೆಯೇ ಆಗುತ್ತಿರಲಿಲ್ಲ, ಅವರನ್ನು ಬಿಟ್ಟು ಹೋಗಿದ್ದಕ್ಕೆ ದೊಡ್ಡ ಚರ್ಚೆಯಾಗಿದೆ, ಯಾವಾಗಲೂ ನೀವು ಅವರ ಜೊತೆಯಲ್ಲಿಯೇ ಹೋಗಬೇಕು ಸ್ವಾಮಿ. ನಮ್ಮ ದೇಶದಲ್ಲಿ ಸೆಕ್ಯುಲರಿಸಂ ಬಗ್ಗೆ ಮಾತನಾಡುತ್ತೇವೆ, ನ್ಯಾಷನಲ್ ಇಂಟಿಗ್ರೇಷನ್ ಬಗ್ಗೆ ಮಾತನಾಡುತ್ತೇವೆ, ನಮ್ಮಲ್ಲಿ ಮತ, ಜಾತಿ, ಏನೂ ಇಲ್ಲವೆಂದು ಮಾತನಾಡುತ್ತೇವೆ There is no caste, colour and creed. ನಾಳೆ ನಾನು ಮಂತ್ರಿಯಾದರೂ ಈ ಡೈಲಾಗೆ. ನಮ್ಮದು style ಇದೇ ತಾನೆ? Ours is a secular country. ಈಗ ಸೆಕ್ಯುಲರಿಸಂ ಇಲ್ಲವೇ? Anybody can come and give prayer, nothing wrong in it. If anything goes wrong that my respectful Hon'ble Chief Minister. ಎಲ್ಲಿ ರಾಂಗ್ ಆಗಿದೆ ಅದನ್ನು ಸರಿಪಡಿಸುವುದಕ್ಕೆ, in future how we have to do, you just convince our people. I am thankful to you for giving me this opportunity. Nothing to worry, we are with you sir, in this hour. Thank you sir,

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನನ್ನ ಸನೇಹಿತರಾದ ರಾಜೇಂದ್ರನ್‌ರವರು ಬಹಳ ಚೆನ್ನಾಗಿ ಮಾತನಾಡಿದರು. ನಾನು ಇವತ್ತು ಸಿದ್ದರಾಮಯ್ಯನವರನ್ನು ಅಭಿನಂದಿಸುತ್ತೇನೆ, ಅವರು ಇವತ್ತು ಆ ಸಭೆಗೆ ಹೋಗಲಿಲ್ಲ, ಶ್ರೀರಾಮರೆಡ್ಡಿಯವರು ಕೇಳಿದಂತೆ

ಮುಖ್ಯಮಂತ್ರಿಗಳನ್ನು ನಾನು ಕೇಳುವುದೇನೆಂದರೆ ಅವರು ಮುಖ್ಯಮಂತ್ರಿಗಳಾಗಿ ಆ ಕಾರ್ಯಕ್ರಮಕ್ಕೆ ಹೋದರೆ ಅಥವಾ ಧರ್ಮಸಿಂಗ್ ಆಗಿ ಹೋದರಾ? ನಾನು ಏಕೆ ಹೇಳುತ್ತೇನೆಂದರೆ ಶ್ರೀ ಜವಾಹರ್ ಲಾಲ್ ನೆಹರೂ ಅವರು ಪ್ರಧಾನ ಮಂತ್ರಿಯಾಗಿದ್ದಾಗ ಅವರು ತಮ್ಮ ಮಂತ್ರಿಮಂಡಲದವರಿಗೆ ಒಂದು ಮಾತನ್ನು ಹೇಳಿದ್ದರು. ನಿಮ್ಮ ನಿಮ್ಮ ರಿಲೀಜನ್ ಅನ್ನು ಪ್ರಾಕ್ಟೀಸ್ ಮಾಡಲಿಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಧರ್ಮದ ಕಾರ್ಯಗಳಿಗೆ ಹೋಗುವಾಗ ನೀವು ಸರ್ಕಾರಿ ಕಾರುಗಳನ್ನು ತೆಗೆದುಕೊಂಡು ಹೋಗಬಾರದೆಂದು ಹೇಳಿದ್ದರು. ಅವರು ಸರ್ಕುಲರ್ ಕಳುಹಿಸಿದ್ದರು. ಅದಕ್ಕೆ ನಾನು ಕೇಳುತ್ತಿದ್ದೇನೆ. ಸರ್ಕಾರಿ ವ್ಯವಸ್ಥೆಯನ್ನು ಉಪಯೋಗ ಮಾಡಿ ಹೋಗುವಂಥದ್ದು ತಪ್ಪು. ನಿಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ನಾವು ಮಧ್ಯೆದಲ್ಲಿ ಬರುವುದಕ್ಕೆ ಆಗುವುದಿಲ್ಲ. ಇಂಟರ್‌ಫಿಯರ್ ಆಗಲಿಕ್ಕೆ ಆಗುವುದಿಲ್ಲ. ನಾವು ಅದನ್ನು ಕ್ವೊಶ್ಚನ್ ಸಹ ಮಾಡುವುದಿಲ್ಲ. ಆದರೆ ಸರ್ಕಾರ ಜಕ್ಕೂರು ವಿಮಾನ ನಿಲ್ದಾಣವನ್ನು ಕೊಟ್ಟಿದ್ದಂತು ಸರಿಯೇ? ಆ ಲೆಕ್ಕಾಚಾರಗಳ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಕೇಳಿದರು. ಇದರ ಬಗ್ಗೆ ಮಾಹಿತಿಯನ್ನು ಸದನಕ್ಕೆ ಕೊಡಬೇಕಾಗುತ್ತದೆ. ಆದರೆ ನಾನು ಮಾನ್ಯ ಯಡಿಯೂರಪ್ಪನವರ ಮಾತನ್ನು ಬಹಳ ಸೂಕ್ಷ್ಮವಾಗಿ ಆಲಿಸಿದೆ. ನಮ್ಮ ಸ್ನೇಹಿತರೆಲ್ಲಾ ಹೇಳಿದರು. ಬೆನ್ನಿಹಿನ್ ಬಂದಿದ್ದಕ್ಕಿಂತ ಜಾಸ್ತಿ, ಅವರು ಮಾಡಿದ್ದಕ್ಕಿಂತ ಜಾಸ್ತಿ ಪಬ್ಲಿಸಿಟಿಯನ್ನು ಇವರೇ ಅವರಿಗೆ ಕೊಟ್ಟು ಬಿಟ್ಟರು. ಅಗತ್ಯ ಇರಲಿಲ್ಲ. ನೀವು ಅಷ್ಟು ಗಲಾಟೆಯನ್ನು ಮಾಡಿ, ಪ್ರಚಾರ ಕೊಡುವಂತಹದ್ದು ಅಗತ್ಯ ಇರಲಿಲ್ಲ. ದೆಹಲಿಗೆ ಬಂದಿದ್ದು, ಬಾಂಬೆಗೆ ಅವರು ಬಂದಿದ್ದು ನನಗೆ ಗೊತ್ತೇ ಇಲ್ಲ. ನಾನು ದೂರದರ್ಶನದಲ್ಲಿ ಸಹ ಅವರ ಕಾರ್ಯಕ್ರಮವನ್ನು ನೋಡಲಿಲ್ಲ. ಬೆನ್ನಿಹಿನ್ ಕಾರ್ಯಕ್ರಮವನ್ನು ನಾನು ನೋಡಲಿಲ್ಲ. ಆದರೆ ನೀವೇ ಏಕೆ ಇಷ್ಟು ಪ್ರಚಾರವನ್ನು ಇಡೀ ರಾಜ್ಯಕ್ಕೆ, ಇಡೀ ದೇಶಕ್ಕೆ ಪ್ರಚಾರವನ್ನು ಕೊಟ್ಟಿರಿ? ಅದಲ್ಲದೆ ನಮ್ಮ ಸ್ವತ್ತನ್ನು ನಾವು ಹಾಳು ಮಾಡಿಕೊಂಡಿದ್ದು. ಬಸ್‌ಗೆ ಬೆಂಕಿ ಕೊಟ್ಟಿರಿ, ಕಾರ್‌ಗೆ ಬೆಂಕಿ ಕೊಟ್ಟಿರಿ. ಇದ್ದ ಕಟ್ಟಡಗಳಿಗೆ ಕಲ್ಲನ್ನು ಹೊಡೆದಿರಿ. ಇದು ಸರಿನಾ? ಬೆನ್ನಿಹಿನ್ ಬಂದ. ಅವನು ಚೀಲ ಹಿಡಿದ. ದುಡ್ಡು ಮಾಡಿಕೊಂಡು ತೆಗೆದುಕೊಂಡು ಹೋದ. ನೀವು ನಮ್ಮ ಆಸ್ತಿಯನ್ನು ಹಾಳು ಮಾಡುವಂತಹದ್ದು ಇದು ಎಂತಹ ದುರಂತ ಸ್ವಾಮಿ? ದಯವಿಟ್ಟು, ನೀವು ಅನೇಕ ಬಂದ್‌ಗಳನ್ನು ಇತ್ತೀಚಿನ ದಿನಗಳಲ್ಲಿ ಮಾಡಿದಿರಿ. ನೀವು ಆಲೋಚನೆಯನ್ನು ಮಾಡಿ. ಯಾರಿಗೆ ತೊಂದರೆ ಆಯಿತು? ನಮ್ಮ ರಾಜ್ಯದ ಸಾಮಾನ್ಯ ಜನರಿಗೆ ತೊಂದರೆ ಆಗಿದ್ದು ಬಿಟ್ಟರೆ ಅಲ್ಲಿ ಬಂದು ಹೋದವರಿಗೆ ಏನೂ ತೊಂದರೆ ಆಗಲಿಲ್ಲ. ನಾನು ಮಾನ್ಯ ವಾಟಾಳ್ ನಾಗರಾಜ್ ಅವರ ಮಾತನ್ನು ಒಪ್ಪುತ್ತೇನೆ. ನಾನೂ ಸಹ ತಂದೆ ತಾಯಿಗಳ ಕಾಲಿಗೆ ಬಿಟ್ಟು ಬೇರೆಯವರ ಕಾಲಿಗೆ ಬೀಳುವುದಿಲ್ಲ. ಆದರೆ ಸ್ವಲ್ಪ ಬದಲಾವಣೆ ಇದೆ. ನಾನು ಎಲ್ಲಾ ಜಾತಿಗಳ, ಎಲ್ಲಾ ಧರ್ಮಗಳ ಸಭೆ ಕರೆದಾಗಲೂ ಹೋಗಿದ್ದೇನೆ. ಹೋಗಿಲ್ಲವೆಂದು ಹೇಳುವುದಿಲ್ಲ. ಎಲ್ಲಾ ಧರ್ಮಗಳ ಸಭೆಗೆ ಹೋಗಿದ್ದೇನೆ. ಆದರೆ ನಿಮ್ಮ ಪಕ್ಷದವರೇ ಬಂದಿದ್ದರು. ಮುಸ್ಲಿಮ್ಸ್ ಕಾರ್ಯಕ್ರಮಕ್ಕೆ ಬಂದಿದ್ದರು. ಕ್ರಿಶ್ಚಿಯನ್ಸ್ ಕಾರ್ಯಕ್ರಮಕ್ಕೆ ಬಂದಿದ್ದರು. ಈಗೆಲ್ಲಾ ಬಂದು ಕುಳಿತುಕೊಳ್ಳುತ್ತಾರೆ. ಮಾನ್ಯ ಸಾಂಗ್ಲಿಯಾನಾ ಅವರ ಹೇಳಿಕೆ ಇದೆ. ನೀವು ಅವರನ್ನು ಪಕ್ಷದಿಂದ ಹೊರಗೆ ಹಾಕುತ್ತೀರಾ? ಫಸ್ಟ್ ಅವರನ್ನು ಹೊರಗೆ ಹಾಕಿ ನೀವು ಚರ್ಚೆ ಮಾಡಿ.

ಶ್ರೀ ಜೆ. ಶಿವಣ್ಣ : ನೀವು ಆ ಬಗ್ಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಉಪದೇಶ ಬೇಡ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವೂ ಸಹ ನಮಗೆ ಉಪದೇಶ ಹೇಳುವ ಅಗತ್ಯವೂ ಇಲ್ಲ.

ಗೊಂದಲ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹಿಂದೂ ಧರ್ಮದ ಬಗ್ಗೆ ನೀವು ನನಗೆ ಹೇಳಬೇಕಾಗಿಲ್ಲ. ನಾನು ಒಬ್ಬ ಹಿಂದು. ನೀವು ಸಾಂಗ್ಲಿಯಾನ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲು ಆಗದಿದ್ದರೆ ರಾಜ್ಯದ ಬಗ್ಗೆ ಏನು ಮಾತನಾಡುತ್ತೀರಿ?

ಶ್ರೀ ಜೆ.ಎ. ಶ್ರೀರಾಮ ರೆಡ್ಡಿ : ನೀವು ಮಾತನಾಡಿ. ನೀವು ಮಾತನಾಡ ಬೇಡಿ ಎಂದು ಹೇಳಲಿಲ್ಲ. ಆದರೆ ನೀವು ನಮಗೆ ಉಪದೇಶ ಮಾಡಬೇಡಿ.

ಗೊಂದಲ

ಅಧ್ಯಕ್ಷರು : ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಿಮಗೆ ಮಾತನಾಡಲು ಅವಕಾಶವನ್ನು ಮಾನ್ಯ ಅಧ್ಯಕ್ಷರು ಕೊಡುತ್ತಾರೆ. ಮಾತನಾಡಿ.

ಶ್ರೀ ಬಿ. ಶಿವಣ್ಣ : ಇವರು ಉಪದೇಶ ಮಾಡುವ ಅಗತ್ಯ ಇಲ್ಲ.

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ನೀವು ಮಾನ್ಯ ಮುಖ್ಯಮಂತ್ರಿಗಳಿಂದ ರಾಜೀನಾಮೆ ಕೇಳುವುದಕ್ಕೆ ಪ್ರಥಮವಾಗಿ ಸಾಂಗ್ಲಿಯಾನ ಅವರ ರಾಜೀನಾಮೆಯನ್ನು ಕೇಳಿ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳಿ. ಅದಕ್ಕೆ ನಾನು ಒಪ್ಪುತ್ತೇನೆ. ಅದಕ್ಕೆ ಮಾನ್ಯ ಯಡಿಯೂರಪ್ಪನವರು ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ನಾವೇನಾದರೂ ಉಪದೇಶವನ್ನು ಮಾಡುವಾಗ ನಾವು ಮೊಗಲು ಪ್ರಾಕ್ಟೀಸ್ ಮಾಡಬೇಕು. ಆಮೇಲೆ ಪ್ರೀಚ್ ಮಾಡಬೇಕು. ಪ್ರೀಚ್ ಮಾಡುವುದು ಒಂದು ಪ್ರಾಕ್ಟೀಸ್ ಮಾಡುವುದು ಒಂದು ಆಗಬಾರದು. ಅದಕ್ಕೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಸದನದ ಸಮಯವನ್ನು ಬೆನ್ನಿಹಿನ್ ಬಗ್ಗೆ ಚರ್ಚೆ ಮಾಡಿದ್ದೇ ತಪ್ಪು. ಇಲ್ಲಿ ಚರ್ಚೆಗೆ ಬರಬಾರದಿತ್ತು. ಬೆನ್ನಿಹಿನ್ ಅವರು ದೆಹಲಿಗೆ ಬಂದಾಗಲೂ ಅನೇಕ ಮುಖಂಡರು ಹೋಗಿದ್ದರು ಎಂದು ನಾನು ಕೇಳಿದ್ದೇನೆ. ಹೈದರಾಬಾದ್‌ಗೆ ಬಂದಾಗಲೂ ಹೋಗಬಹುದು. ಎಲ್ಲಾ ಪಕ್ಷದವರೂ ಹೋಗುತ್ತಾರೆಂದು ಕಾಣುತ್ತದೆ. ಆದರೆ ಮಹಾರಾಷ್ಟ್ರದಲ್ಲಿ ಅನೇಕ ಮುಖಂಡರು ಹೋಗಿದ್ದರು ಎಂದು ನಾನು ಕೇಳಿದ್ದೇನೆ. ಅದರ ಬಗ್ಗೆ ನಾನು ಹೆಸರು ತೆಗೆಯುವುದಿಲ್ಲ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ : ಬಾಳ ಠಾಕ್ರೆ ಅವರು ಅಟೆಂಡ್ ಆಗಿದ್ದರು.

ಅಧ್ಯಕ್ಷರು : ಗಲಾಟೆ ಬೇಡ. ಅವರು ಮಾತನಾಡಲಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನೊಬ್ಬ ಹಿಂದೂ. ನನ್ನನ್ನು ಕನ್‌ವರ್ಟ್ ಮಾಡಲಿಕ್ಕೆ ಯಾರಹತ್ತಿರವೂ ಸಾಧ್ಯ ಆಗುವುದಿಲ್ಲ. ಹಿಂದೂಗಳು ಯಾರು ಹಿಂದುಗಳು ಆಗಿಯೇ ಉಳಿಯಬೇಕೆಂದು ಇದ್ದಾರೋ ಅವರು ಹಿಂದುಗಳಾಗಿಯೇ ಉಳಿಯುತ್ತಾರೆ. ಅವರನ್ನು ಪರಿವರ್ತನೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಸ್ವಾಮೀಜಿಗಳು ವಿದೇಶಕ್ಕೆ ಹೋಗಿದ್ದಾರೆ. ಅಲ್ಲಿ ಅವಕಾಶ ಇತ್ತು. ಅದೇ ರೀತಿ ಅವರು ಬಂದಿದ್ದಾರೆ. ನಿಮಗೆ ಇಷ್ಟ ಇದ್ದರೆ ಹೋಗಿ, ಇಲ್ಲದಿದ್ದರೆ ಬಿಡಿ. ಮಾನ್ಯ

ಸಿದ್ದರಾಮಯ್ಯನವರು ಅದರ ಬಗ್ಗೆ ಏನಾದರೂ ಚರ್ಚೆ ಮಾಡಿದ್ದಾರಾ? ಅವರು ಹೋಗಲಿಲ್ಲ, ಚರ್ಚೆ ಮಾಡಲಿಲ್ಲ. ನಾನೂ ಹೋಗಲಿಲ್ಲ. ಟಿವಿಯಲ್ಲೂ ನೋಡಲಿಕ್ಕೆ ಹೋಗಲಿಲ್ಲ.

ಶ್ರೀ ಎಸ್. ರಾಚೇಂದ್ರನ್ : ನೆಕ್ಸ್ಟ್ ಟೈಮ್ ಏನಾದರೂ ಹೋಗುತ್ತೀರಾ ಸಾರ್.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹೋಗುವುದಿಲ್ಲ. ನಾವು ಅದನ್ನು ಅರ್ಥ ಮಾಡಿಕೊಂಡರೆ ಇನ್ನು ಮುಂದಿನ ದಿನಗಳಲ್ಲಿ ಅಂತಹವರು ಬಂದಾಗ ನಮ್ಮ ಸರ್ಕಾರಿ ಮೆಷಿನರಿಯನ್ನು ಯೂಸ್ ಮಾಡುವಂಥದ್ದು ತಪ್ಪು. ಇಂತಹ ಸ್ಥಳಗಳನ್ನು ಕೊಡುವಂಥದ್ದು ತಪ್ಪು. ಆದರೆ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡಿ ಅವರಿಗೇ ಪ್ರಚಾರ ಕೊಡುವಂಥದ್ದು ಮಹಾಸ್ ತಪ್ಪು ಎಂದು ಹೇಳುತ್ತಾ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಸಭಾ ನಾಯಕರು ಮಾತನಾಡುತ್ತಾರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕ್ರಿಶ್ಚಿಯನ್ ವರ್ಗದ ಕ್ಯಾಥಲಿಕ್ ಸೊಸೈಟಿಯವರಿಂದ ಹೇಳಿಕೆ ಬಂದಿದೆ.

ಅಧ್ಯಕ್ಷರು : ದಯಮಾಡಿ, ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಮಾಧುಸ್ವಾಮಿ ಅವರು, ಮಾನ್ಯ ವಾಟಾಳ್ ನಾಗರಾಜ್ ಅವರು....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕ್ಯಾಥಲಿಕ್ ಸೊಸೈಟಿಯವರು ಈ ಬೆನ್ನಿಹಿನ್ ಕಾರ್ಯಕ್ರಮಕ್ಕೆ ವಿರೋಧ ಮಾಡಿದ್ದಾರೆ, ಅವರು ವಿರೋಧ ಮಾಡುತ್ತಿರುವುದಕ್ಕೆ ಪ್ರಮುಖವಾದ ಅಂಶಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಎಲ್ಲಾ ಮಾತನಾಡಿದ್ದಾರೆ, ತಾವು ಕುಳಿತುಕೊಳ್ಳಿ, ಎಲ್ಲಾ ನಾಯಕರೂ ಮಾತನಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ವಿಷಯದ ಬಗ್ಗೆ ಎರಡೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ವಾಟಾಳ್ ನಾಗರಾಜ್ ಅವರು, ಇತ್ಯಾದಿ ಎಲ್ಲರೂ ಮಾತನಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮುಖ್ಯಮಂತ್ರಿಗಳು ಏಕೆ ರಾಜೀನಾಮೆ ಕೊಡಲೇಬೇಕಾದಂತಹ ಪರಿಸ್ಥಿತಿ ಏಕೆ ಇದೆ ಎಂಬುದನ್ನು ಹೇಳುತ್ತೇವೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಗೊಂದಲ

ಅಧ್ಯಕ್ಷರು : ಇಲ್ಲಿ ಎಲ್ಲಾ ಮುಖಂಡರೂ ಮಾತನಾಡಿದ್ದಾರೆ. ಮಾನ್ಯ ಸಭಾ ನಾಯಕರು ಮಾತನಾಡಿದ್ದಾರೆ.

ಶ್ರೀ ಧರ್ಮಸಿಂಗ್ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ವಿಶೇಷವಾದಂತಹ ವಿಷಯ ಇದೆ ಎಂದು ಹೇಳಿ ಎಲ್ಲರಿಗೂ ಕೂಡ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ....

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಭಾ ನಾಯಕರು ಮಾತನಾಡುತ್ತಿದ್ದಾಗ ಎಲ್ಲರೂ ಸಹಕಾರ ಮಾಡಬೇಕು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಅವಕಾಶ ಮಾಡಿಕೊಡಿ.

ಗೊಂದಲ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ದಯಮಾಡಿ ಒಂದು ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ನಿಮ್ಮ ನಾಯಕರು ಮಾತನಾಡಿದ್ದಾರೆ.

ಶ್ರೀ ಧರ್ಮಸಿಂಗ್ : ಇದು ನಿಲುವಳಿ ಸೂಚನೆ ಅಲ್ಲ.

ಅಧ್ಯಕ್ಷರು : ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ನಾವು ಸಹ ಸಿಗ್ನೇಟರಿ ಇದ್ದೇವೆ.

ಶ್ರೀ ಧರ್ಮಸಿಂಗ್ : ಮಾನ್ಯ ಜ್ಞಾನೇಂದ್ರ ಅವರೇ, ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಸಮಗ್ರವಾದಂತಹ ಚರ್ಚೆ ಆಗಿದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಧರ್ಮಸಿಂಗ್ : ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲು ಒಂದು ದಿವಸ ಕಾಲ ನಿಗದಿ ಮಾಡಿ, ನಮಗೆ ಅಭ್ಯಂತರ ಇಲ್ಲ. ನಾನು ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿ ಆಗಿ ಆಡಳಿತ ನಡೆಸುತ್ತಿದ್ದೇನೆ. ಅಲ್ಲಿರತಕ್ಕ ಕೆಲವು ವ್ಯವಸ್ಥಾಪಕರು ಬಂದರು. ಬೆನ್ನಿಹಿನ್ ಬರುತ್ತಿದ್ದಾರೆ. ಇವತ್ತು ದೇಶದಲ್ಲಿ ಮೊಟ್ಟಮೊದಲನೆಯದಾಗಿ ಬೆನ್ನಿಹಿನ್ ಬಂದಿಲ್ಲ. ಎನ್‌ಡಿಎ ಸರ್ಕಾರ ಇದ್ದಾಗ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನ ಮಂತ್ರಿ ಆಗಿದ್ದಾಗ, ಮಾನ್ಯ ಎಲ್.ಕೆ. ಅದ್ವಾನಿ ಅವರು ಗೃಹ ಸಚಿವರಾಗಿದ್ದಾಗ, ಬೆನ್ನಿಹಿನ್ ಬಾಂಬೆಗೆ ಬಂದರು. ಬಾಳಾ ಠಾಕ್ರೆ ಕೂಡ ಅಲ್ಲಿಹೋಗಿದ್ದರು. ಇವತ್ತು ಎಲ್ಲಾ ಧರ್ಮಗಳಿಗೆ ours is a secular state. ಏಕೆ ನಾವು ಒಂದಾಗಿದ್ದೇವೆ? ಕಾಂಗ್ರೆಸ್ ಮತ್ತು ಜನತಾ ದಳ ಎಲ್ಲಾ ಏಕೆ ಒಂದಾಗಿದ್ದೇವೆ ಎಂದರೆ ನೀವು ಇಲ್ಲಿಗೆ ಬರಬಾರದು ಎಂದು ಒಂದಾಗಿದ್ದೇವೆ. ಅವಕಾಶ ಇಲ್ಲ. ಆದರೆ ವಿರೋಧ ಪಕ್ಷದ ನಾಯಕರಿಗೆ ಏನು ಹೇಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ನಿಮ್ಮಲ್ಲಿ ಒಬ್ಬರಿಗೊಬ್ಬರಿಗೂ ಹೊಂದಾಣಿಕೆ ಇಲ್ಲ.

ಶ್ರೀ ಧರ್ಮಸಿಂಗ್ : ಅದು ಬಿಡಿ.

ಅಧ್ಯಕ್ಷರು : ಮಾನ್ಯ ಸಭಾ ನಾಯಕರು ಮಾತನಾಡುವಾಗ ಇಡೀ ಸದನ ಕೇಳಬೇಕು. ಇಂತಹ ಸಾಮಾನ್ಯ ವಿಚಾರವೂ ತಮಗೆ ಗೊತ್ತಿಲ್ಲ ಎಂದರೆ ನಾವೇನು ಮಾಡುವುದು?

ಶ್ರೀ ಧರ್ಮಸಿಂಗ್ : ಬಹಳಷ್ಟು ಸಲ ಆವೇಶದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ರಾಜೀನಾಮೆ ಕೇಳಿದ್ದಾರೆ. ಈಗಾಗಲೇ ಮಾನ್ಯ ರಾಜೇಂದ್ರನ್ ಅವರು, ಮಾನ್ಯ ವಾಟಾಳ್ ನಾಗರಾಜ್ ಅವರುಗಳು ಮಾತನಾಡಿದ್ದಾರೆ. ನಾವು ರಾಜೀನಾಮೆ ಕೊಡಲಿಕ್ಕೆ ಬಂದಿಲ್ಲ, ಸರ್ಕಾರವನ್ನು

ನಡೆಸಲಿಕ್ಕೆ ಬಂದಿದ್ದೇವೆ. ನನ್ನ ರಾಜೀನಾಮೆ ಕೇಳಬೇಕಾದರೆ ಮೊದಲು ನೀವು ರಾಜೀನಾಮೆ ಕೊಡಬೇಕು ನೀವು ವಿರೋಧ ಪಕ್ಷದ ನಾಯಕರಲ್ಲ. ಕರ್ನಾಟಕದ ಐದು ಕೋಟಿ 45 ಲಕ್ಷ ಜನರ ವಿರೋಧ ಪಕ್ಷದ ನಾಯಕರು. ಇವತ್ತು ನಾನು ಏಕೆ ಹೇಳಿದ್ದೇನೆ? ಇಶ್ಯೂಗೆ ಇಶ್ಯೂ ಮಾಡತಕ್ಕ ರೀತಿಯಲ್ಲಿ ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ತಾವು ಹತಾಶರಾಗಿದ್ದೀರಿ. ಸಾಕಷ್ಟು ಜನ ಪಾಠವನ್ನು ಕಲಿಸಿದ್ದಾರೆ. ಪ್ರತಿಯೊಂದು ವಿಷಯದಲ್ಲೂ ಕೂಡ ಈಗಾಗಲೇ ಮಾನ್ಯ ರಮೇಶ್ ಕುಮಾರ್ ಅವರು ಹೇಳಿದ ಹಾಗೆ ಶ್ರೀಮತಿ ಸೋನಿಯಾ ಗಾಂಧಿ ಅವರು ಯುಪಿಎ ಸರ್ಕಾರದ ಅಧ್ಯಕ್ಷಿಣಿ ಆಗಿದ್ದಾರೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷಿಣಿ ಆಗಿದ್ದಾರೆ. ವಿರೋಧ ಪಕ್ಷದ ನಾಯಕಿಯಾಗಿ ಅಟಲ್ ಬಿಹಾರಿ ವಾಜಪೇಯಿ ಅವರು ಮಾನ್ಯ ಪ್ರಧಾನ ಮಂತ್ರಿ ಆಗಿದ್ದಾಗ ಅವರ ಎದುರುಗಡೆ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ದೇಶಕ್ಕೆ ಸ್ಯಾಕ್ರಿಫೈಸ್ ಮಾಡಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರನ್ನು 32 ಗುಂಟೇಟಿನಿಂದ ಯಾವ ರೀತಿಯಾಗಿ ಪ್ರತಿಕ್ರಿಯವಾದಿ ಶಕ್ತಿಗಳು ಕೊಂದು ಹಾಕಿದರು? ಈ ದೇಶದ ಇತಿಹಾಸದಲ್ಲಿ ರಾಜ್ಯದ ಯುವ ಪ್ರಧಾನಿಯಾಗಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು: ಯಾವ ರೀತಿಯಲ್ಲಿ ಅವರಹತ್ಯೆ ಆಯಿತು. ಎಂಬುದೆಲ್ಲವನ್ನೂ ಕೂಡ ಜನತೆ ತಮ್ಮ ಕಣ್ಣಿನಲ್ಲಿ ನೋಡಿದ್ದಾರೆ. "ಈ ಸಲ ಬರುವುದಿಲ್ಲ ಮತ್ತೆ ಎನ್‌ಡಿಎ ಬರುತ್ತದೆ" ಎಂದು ಹೋದ ಸಲ ಲೆಕ್ಕ ಹಾಕಿದರು. ಎಲೆಕ್ಟ್ರಾನಿಕ್ ಮೀಡಿಯಾದವರೂ ಹೇಳಿದರು. ಆದರೆ, ಇವ್ರೊತ್ತು ಏನಾಯಿತು? ಜನರು ಪಾಠ ಕಲಿಸಿದರು! ಅವರ ಪಕ್ಷದವರು ಪ್ರಧಾನಮಂತ್ರಿಯಾಗಲಿಲ್ಲ. "ವಿದೇಶಿ ಮೂಲ"ವೆಂದು ಪ್ರಸ್ತಾಪಿಸಿದಿರಿ. ಇಂತಹ ವಾದಗಳನ್ನೆಲ್ಲಾ ಎಲ್ಲಿಯವರೆಗೆ ತೆಗೆದುಕೊಂಡು ಹೋಗುತ್ತೀರಿ? ರಾಷ್ಟ್ರದಲ್ಲಿ ಮತ್ತು ರಾಜ್ಯಗಳಲ್ಲಿ ದಿನನಿತ್ಯ ಜೀವನಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಮಸ್ಯೆಗಳಿವೆ. ಇವುಗಳ ಬಗ್ಗೆ ನೇರವಾಗಿ ಮಾತನಾಡಿ. ಈ ಹಿಂದೆ ಆರ್ .ಎಸ್.ಎಸ್.ನ ಸುದರ್ಶನ್‌ರವರು ಬಂದಿದ್ದಾಗ ಬೆಂಗಳೂರಿನ ಹೊರವಲಯದಲ್ಲಿ ಆರ್‌ಎಸ್‌ಎಸ್ ಸಮಾವೇಶ ನಡೆಸಲು ಅವಕಾಶ ಮಾಡಿಕೊಟ್ಟಿದ್ದೇವೆ. ಆರ್‌ಎಸ್‌ಎಸ್ ಕ್ಯಾಂಪ್‌ಗೆ ನಾವು, ನಮ್ಮ ಮೊದಲಿನ ಗೃಹಮಂತ್ರಿಗಳಾಗಿದ್ದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು, ಜಾಫರ್ ಷರೀಫ್‌ರವರೂ ಕೂಡ ಅಲ್ಲಿಗೆ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇವೆ. ಎಲ್ಲಾ ಧರ್ಮದವರಿಗೂ ಅವರವರ ಧರ್ಮಾಚರಣೆ ಕೈಗೊಳ್ಳಲು ಅನುಕೂಲವಾಗುವಂತೆ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುವುದರಿಂದ, ಸರ್ಕಾರ ಆ ದಿಸೆಯಲ್ಲಿ ಕಾರ್ಯೋನ್ಮುಖವಾಗುತ್ತದೆ. ಪ್ರಾರ್ಥನಾ ಸಭೆ ಸಂಬಂಧ ಆಯೋಜಕರು ಸುಮಾರು ಹತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಡಿಪಾಸಿಟ್ ಮಾಡಿದ್ದಾರೆ. ಅವರಿಂದ ಫೀ ತೆಗೆದುಕೊಂಡಿದ್ದೇವೆ. ವಿಶಾಲ ಪ್ರದೇಶದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮಕ್ಕೆ ನಾನು ಹೋಗಿ ಬಂದಿದ್ದೇನೆ. They have invited. ನನಗೆ ಅದರಲ್ಲಿ ನಂಬಿಕೆಯಿಲ್ಲ. ಆದರೂ ಅವರ ಆಹ್ವಾನದ ಮೇರೆಗೆ ನಾವು ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇವೆ. ಹಿಂದೂ ಧರ್ಮಕ್ಕೆ ಈ ರಾಷ್ಟ್ರದಲ್ಲಿ ಒಂದು ಬೃಹತ್ ಪರಂಪರೆ ಇದೆ. ನಾವು ವಿವೇಕನಂದರನ್ನೂ, ಬೆನ್ನಿ ಹಿನ್‌ರನ್ನೂ ಪರಸ್ಪರ ಹೋಲಿಸಲಿಲ್ಲ, ವಿವೇಕಾನಂದರು ಒಂದು ನೂರು ವರ್ಷಗಳ ಹಿಂದೆ ಚಿಕಾಗೋಗೆ ತೆರಳಿ ಅಲ್ಲಿ ಹಿಂದೂ ಧರ್ಮ, ಸಂಸ್ಕೃತಿ, ಪರಂಪರೆಗಳ ಕುರಿತು ಪ್ರಚಾರ ಮಾಡಿದ್ದಾರೆ. ಅದೇ ರೀತಿ ಆಚಾರ್ಯ ರಜನೀಶ್‌ರವರೂ ಲಾಸ್ ಏಂಜಲಿಸ್‌ಗೂ ತೆರಳಿ ಹಿಂದೂ ಧರ್ಮದ ಪ್ರಚಾರ ಕೈಗೊಂಡಿದ್ದಾರೆ. ವಿದೇಶಗಳಿಗೆ ಇಲ್ಲಿಂದ ಎಷ್ಟೋ ಸ್ವಾಮೀಜಿಗಳೂ ಕೂಡ ತೆರಳುತ್ತಾರೆ. ಚಿನ್ಮಯಾನಂದ ಸ್ವಾಮಿಗಳೂ ಹೋಗುತ್ತಾರೆ, ಹಿಂದೂ

ಧರ್ಮದ ಪ್ರಚಾರ ಮಾಡುತ್ತಾರೆ. ಅದಕ್ಕೆ ಅವಕಾಶವಿದೆ. "ಹರೇ ರಾಮ ಹರೇ ಕೃಷ್ಣ" ಪಂಥಕ್ಕೆ ಸೇರಿರುವ ಬಹಳಷ್ಟು ದೇವಾಲಯಗಳು ಎಲ್ಲಾ ಕಡೆಗಳಲ್ಲೂ ಇವೆ. ಇವೊತ್ತು ವಿಶ್ವ ಒಂದಾಗುತ್ತಿರುವ ಸಂದರ್ಭದಲ್ಲಿ ಅಲ್ಲಿನವರು ಇಲ್ಲಿಗೆ ಬರುತ್ತಾರೆ, ಹೋಗುತ್ತಾರೆ ಅದೇ ರೀತಿ ಇಲ್ಲಿನವರು ಅಲ್ಲಿಗೆ ಹೋಗುತ್ತಾರೆ, ಬರುತ್ತಾರೆ. ಇವೆಲ್ಲಾ ನಿಮಗೇಕೆ? ನೀವು ಪ್ರತಿಭಟಿಸಿದಿರಿ. ಮಲ್ಲೇಶ್ವರಂ ಮತ್ತು ಬಸವನಗುಡಿಗಳಲ್ಲಿ ಸಂಚರಿಸುತ್ತಿದ್ದ ಬಸ್ಸುಗಳಿಗೆ ಕಲ್ಲು ಹೊಡೆದಿರಿ. ಅಲ್ಲಿ ಕಲ್ಲು ಹೊಡೆದರೂ ಕೂಡ ನಮ್ಮ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆರಿಸಿ ಬಂದಿದ್ದಾರೆ. ಬರೀ ಘೋಷಣೆಗಳ ಮೂಲಕ ಜನರನ್ನು, ಪಕ್ಷವನ್ನು ಕಟ್ಟುವುದಕ್ಕಾಗುವುದಿಲ್ಲ. ಇವೊತ್ತು ಅಲ್ಲಿ ಆಯೋಜಿಸಲಾಗಿದ್ದ ಪ್ರಾರ್ಥನಾ ಸಭೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸುಮಾರು 1 ಲಕ್ಷ 45 ಸಾವಿರ ರೂಪಾಯಿಗಳಷ್ಟು ಪ್ರವೇಶ ತೆರಿಗೆ ಸಂಗ್ರಹಿಸಿದ್ದೇವೆ. ಇದಕ್ಕೆ ಸಾಕ್ಷಿಯಾಗಿ ನಮ್ಮ ಕಮೀಷನರ್ ಕೂಡ ಇಲ್ಲಿದ್ದಾರೆ. ನಾವು ಏನೂ ಕೂಡ ಕೊಟ್ಟಿಲ್ಲ. ಕಾರ್ಯಕ್ರಮಕ್ಕೆ ಬಂದೋಬಸ್ತ್ ಒದಗಿಸಿದ್ದರಿಂದ ಪೊಲೀಸ್ ಸಿಬ್ಬಂದಿಗೆ ಭತ್ಯೆ ನೀಡಿದ್ದರಿಂದ ಪೊಲೀಸ್ ಇಲಾಖೆಗೆ 46 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದೆ. ಅಲ್ಲಿ ಆಯೋಜಿಸಲಾಗಿದ್ದ ಧಾರ್ಮಿಕ ಕಾರ್ಯಕ್ರಮದ ಬಗ್ಗೆ ತಮ್ಮ ಆವೇಶಭರಿತ ಭಾಷಣ, ದಿನನಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ರೀತಿಯಲ್ಲಿ ಮಹಾತ್ಮಗಾಂಧಿ ಪ್ರತಿಮೆ ಎದುರು ನಡೆಸುತ್ತಿದ್ದ ಪ್ರತಿಭಟನೆಯಿಂದ ಜನಾಭಿಪ್ರಾಯ ಮೂಡಿಸುವ ರೀತಿಯಲ್ಲಿ ನೀವು ಕಾರ್ಯಕ್ರಮ ಹಮ್ಮಿಕೊಂಡರೂ ನಿಮಗೆ ಜನರ ಬೆಂಬಲ ಸಿಗಲಿಲ್ಲ ಎಲ್ಲರೂ ಬಹಳ ನಿರಾಶರಾಗಿ ಹೋಗಿದ್ದಾರೆ ನೋಡಿದ್ದಾರೆ. ಬಂದಿದ್ದಾರೆ. ಜನರನ್ನು ಮೋಡಿಗೊಳಿಸುವ ಸ್ವಾಮಿಗಳಿದ್ದಾರೆ. ನಾವೇನಾದರೂ ಅವರುಗಳ ಬಗ್ಗೆ ಪ್ರಸ್ತಾಪಿಸುತ್ತೇವೆಯೇ? ಧಾರ್ಮಿಕ ಕಾರ್ಯಕ್ರಮಗಳಿಗೆ ಇವೊತ್ತು ಬಹಳಷ್ಟು ಜನರು ಹೋಗುತ್ತಾರೆ. ಅದರಲ್ಲಿ ನಂಬಿಕೆ ಇಡುವುದು, ಬಿಡುವುದು ಅಲ್ಲಿಗೆ ಹೋದವರಿಗೆ ಸಂಬಂಧಿಸಿರುವಂಥಾದ್ದು ಅದಕ್ಕೂ ಸರ್ಕಾರಕ್ಕೂ ಏನು ಸಂಬಂಧವಿದೆ? ಸುಮಾರು ಮೂರು ದಿವಸಗಳ ಕಾಲ ರಾಜ್ಯದಲ್ಲಿ ಇಂತಹ ಒಂದು controversial ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮ ಬಹಳ ಸೌಹಾರ್ದಯುತವಾಗಿ, ಸಂಯಮದಿಂದ ಮತ್ತು ಶಾಂತಿಯುತವಾಗಿ ಯಶಸ್ವಿಯಾಗಿ ನೆರವೇರಲು ಕರ್ನಾಟಕ ಸರ್ಕಾರ ಕ್ರಮ ಕೈಗೊಂಡಿದೆ. This is your Government. You are the Leader of the Opposition. ಅಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮ ಅತ್ಯಂತ ಯಶಸ್ವಿಯಿಂದ ನೆರವೇರಲು ಸರ್ಕಾರದ ವತಿಯಿಂದ ನಾವು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದೇವೆ. ಇದರಿಂದ ಮತಾಂತರವಾಗುತ್ತದೆಂದರೆ..... ಮತಾಂತರ ಹೇಗಾಗುತ್ತದೆ? ಈ ದೇಶದಲ್ಲಿ ಹಿಂದೂ ಧರ್ಮಕ್ಕೆ ಬಹಳ ದೊಡ್ಡ ಪರಂಪರೆ ಇರುವುದರಿಂದ ಮತಾಂತರವಾಗುವುದಿಲ್ಲ. ಎಲ್ಲಿ ಮತಾಂತರವಾಯಿತು? ಮಾನ್ಯ ವಿರೋಧ ಪಕ್ಷದ ನಾಯಕರು ಯಾವಾಗಲೂ ವಿನಾಕಾರಣ ನಮ್ಮ ಭಾವನೆಗಳನ್ನು ಕೆರಳಿಸಬಾರದು. ಇವೊತ್ತು ನಮ್ಮ ಕಡೆಯ ಶಾಸಕರೆಲ್ಲರೂ ಸುಮ್ಮನೆ ಕುಳಿತಿದ್ದಾರೆ. ಆದರೆ, ನೀವು ಇಷ್ಟು ಆವೇಶಭರಿತವಾಗಿ ಹೇಳುತ್ತಿದ್ದೀರಿ. ಇದರಿಂದ ನಿಮಗೆ ಯಾರ ಸರ್ಟಿಫಿಕೇಟ್ ಬೇಕಾಗಿದೆಯೋ ಗೊತ್ತಿಲ್ಲ. ನಿಮ್ಮ ತೊಂದರೆ ಏನೆಂಬುದು ನನಗೆ ಗೊತ್ತಿದೆ. ನಮಗೆ ಏಮೂ ಬೇಕಾಗಿಲ್ಲ. 'ಸೋನಿಯಾಗಾಂಧಿ ಆದೇಶದ ಮೇರೆಗೆ....', ಎಂದು ಏಕಿಷ್ಟು ಆವೇಶಭರಿತವಾಗಿ ಮಾತನಾಡುತ್ತೀರಿ? Sonia Gandhi is the last person. ಇಲ್ಲಿ ನೀವು ತಪ್ಪು ಮಾಡುತ್ತಿದ್ದೀರಿ. ಇವೊತ್ತು ರಾಷ್ಟ್ರ ರಾಜಕಾರಣದಲ್ಲಿ ಅವರನ್ನು ಯುಪಿಎ ಸರ್ಕಾರದ ಅಧ್ಯಕ್ಷಿಣಿಯೆಂದು ಪಾರ್ಲಿಮೆಂಟರಿ ಪಾರ್ಟಿ

ಚುನಾಯಿಸಿತು. ಅಲ್ಲದೆ, ಅವರು ಕಾಂಗ್ರೆಸ್ ಪಕ್ಷದ ನಾಯಕಿಯಾದರು. Because of this dispute, she refused to take the Prime Ministership. She is the lady. ನೀವು ಈ ತರಹ ಮಾತನಾಡಬಾರದು. ಇದೇ ರೀತಿ ನೀವು ಮಾತನಾಡಿ, ಮಾತನಾಡಿಯೇ ನೀವು ಅಲ್ಲಿಗೆ (ವಿರೋಧ ಪಕ್ಷ) ಹೋಗಿ ಕುಳಿತಿದ್ದೀರಿ. ಜನರು ನಿಮಗೆ ಪಾಠ ಕಲಿಸಿದ್ದಾರೆ. ಮುಂದೆಯೂ ಪಾಠ ಕಲಿಸುತ್ತಾರೆ. ನೀವು issues ಮೇಲೆ ಹೋರಾಡಿ, ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡಿ. ನಿಮಗೆ ಏನಾಗಿದೆ? ಅಲ್ಲಿನ ಕಾರ್ಯಕ್ರಮದಿಂದ ಯಾವುದೇ ಮತಾಂತರವಾಗಲಿಲ್ಲ. 2006ರಲ್ಲಿ ಅವರು ಹೈದರಾಬಾದಿಗೂ ಕೂಡ ಬರುತ್ತಿದ್ದಾರೆ. ನಿಮ್ಮದೇ ಸರ್ಕಾರವಿದ್ದಾಗ, ನಿಮ್ಮದೇ ಪಕ್ಷದ ಪ್ರಧಾನಮಂತ್ರಿ ಮತ್ತು ಡೆಪ್ಯುಟಿ ಚೀಫ್ ಮಿನಿಸ್ಟರ್ ಇದ್ದಾಗ, ಬಾಳಾಕ್ರೆಯವರು ಇಂತಹ ಕಾರ್ಯಕ್ರಮಗಳಿಗೆ ಅಟೆಂಡ್ ಆಗುತ್ತಾರೆ. ಆಗ ನಿಮಗೇನೂ ನೋವಾಗುವುದಿಲ್ಲ? ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚಿಸಲು ಸದನದಲ್ಲಿ ನಿನ್ನೆ ನಿಲುವಳಿ ಸೂಚನೆ ಮಂಡಿಸಿದಿರಿ. ಇದರ ಬಗ್ಗೆ ಮಾತನಾಡಿ. ಆದರೆ, ಧಾರ್ಮಿಕ ಕಾರ್ಯಕ್ರಮಗಳಂತಹ ವಿಚಾರಗಳನ್ನು ಪ್ರಸ್ತಾಪಿಸುವುದನ್ನು ಇಲ್ಲಿಗೇ ಬಿಟ್ಟುಬಿಡಿ. ಇನ್ನು ರಾಜೀನಾಮೆ ಪ್ರಶ್ನೆ. ನನ್ನ ರಾಜೀನಾಮೆಗೂ ಅದಕ್ಕೂ ಏನೂ ಸಂಬಂಧವಿಲ್ಲ. ಈ ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಹೇಳುವುದೇನೆಂದರೆ, ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಇದೆ. ಇಂತಹ ಒಂದು ಸಮಾವೇಶವನ್ನು ಬಹಳ ವ್ಯವಸ್ಥಿತವಾದ ರೀತಿಯಲ್ಲಿ ಕಾನೂನಿಗೆ ಯಾವುದೇ ರೀತಿಯಲ್ಲೂ ಧಕ್ಕೆಯಾಗದಂತೆ ಯಶಸ್ವಿಯಾಗಿ ನಾವು ನಡೆಸಿಕೊಂಡು ಹೋಗಿದ್ದೇವೆ. ಕಾರ್ಯಕ್ರಮ ಮೊಟ್ಟಮೊದಲಿಗೆ ರಾಷ್ಟ್ರಗೀತೆಯೊಂದಿಗೆ ಪ್ರಾರಂಭವಾದರೆ, ಸಮಾರೋಪ ಕಾರ್ಯಕ್ರಮದಲ್ಲಿ ತಿರಂಗ ಧ್ವಜವನ್ನು ಎತ್ತಿಹಿಡಿದಿದ್ದಾರೆ. ಆದರೆ, ಸಮಾರಂಭದ ಒಳಗೆ ಅವರು ಏನು ಮಾಡುತ್ತಾರೆಂಬುದು ನಮಗೇನು ಗೊತ್ತು? ಅದಕ್ಕೂ ನಮಗೂ ಸಂಬಂಧವಿಲ್ಲ ಕಾರ್ಯಕ್ರಮದಲ್ಲಿ ಭಾಗವಹಿಸಿದವರೊಬ್ಬರು ಸತ್ತುಹೋದ ಪ್ರಕರಣ ಕುರಿತು ಯಲಹಂಕ ಪೊಲೀಸ್ ಠಾಣೆಯಲ್ಲಿ ವರದಿ ಸಲ್ಲಿಸಿದ್ದೀರಿ. ಈ ಕುರಿತಂತೆ ಬಹಳಷ್ಟು ವಿವರವಾದ ಮಾಹಿತಿಗಳಿವೆ. ಅವೆಲ್ಲದರ ಬಗ್ಗೆ ತಮಗೆ ಮಾಹಿತಿ ಕೊಡುವುದೇನೂ ಇಲ್ಲ. ಆದರೆ, ಗಲಭೆ ಮಾಡುವ ಮುಖಾಂತರ ಸುಮಾರು ಮುನ್ನೂರು ಬಸ್ಸುಗಳಿಗೆ ಕಲ್ಲು ತೂರಿ ಹೊಡೆಯಲು ಹತ್ತು ಜನರು ಸಾಕು. ಪ್ರತಿಭಟನೆ ಎಲ್ಲಿ ನಡೆದಿದೆ? ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲೇ ಜನರಿಂದ ಯಾವುದೇ ಪ್ರತಿಭಟನೆಯಿಲ್ಲ. ನಿಮ್ಮ ಬಾಯಿಂದ ಮಾತ್ರ ಪ್ರತಿಭಟನೆ. ನಿಮ್ಮ ಹೇಳಿಕೆಗಳಿಂದ ಪ್ರತಿಭಟನೆ, ಪತ್ರಕರ್ತರ ಸಮ್ಮುಖದಲ್ಲಿ ಹೇಳಿಕೆಗಳನ್ನು ನೀಡುವ ಮೂಲಕ ಜನಾಭಿಪ್ರಾಯ ಮೂಡಿಸುವುದಕ್ಕಾಗುವುದಿಲ್ಲ. ಜನರು ನಿಮ್ಮ ಹಿಂದೆ ಬರುವುದಿಲ್ಲ. ಈ ವಿಷಯವನ್ನು politicalise ಮಾಡುವ ಕೆಲಸ ಮಾಡಬಾರದು. ಇವೊತ್ತು ಕರ್ನಾಟಕದಲ್ಲಿ ಬೆನ್ನಿ ಹಿನ್ ಕಾರ್ಯಕ್ರಮ ಯಶಸ್ವಿಯಾಗಿ ಜರುಗಲು ಸರ್ಕಾರ ವ್ಯವಸ್ಥಿತ ರೀತಿಯಲ್ಲಿ ಕ್ರಮ ಕೈಗೊಂಡಿದೆ. ಇವರ ಕಾರ್ಯಕ್ರಮದಿಂದಾಗಿ ಹಿಂದೂಗಳ ಮೇಲೆ ಯಾವುದೇ ತರಹದ ಪ್ರಭಾವವಾಗಲಿ, ಬೇರೆ ರೀತಿ ಮತಾಂತರವಾಗತಕ್ಕಂಥದ್ದು ನಡೆದಿಲ್ಲವೆಂದು ನಾನು ಘಂಟಾಘೋಷವಾಗಿ ಮಾನ್ಯ ಅಧ್ಯಕ್ಷರ ಮೂಖಾಂತರ ತಮಗೆ ಹೇಳಬಯಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಮೌಢ್ಯತೆಗೆ.....

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಮಾನ್ಯ ಸದಸ್ಯರು ಎದ್ದು ನಿಂತರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾಗ ನಾವು ಮೌನವಾಗಿದ್ದೆವು. ಅವರು ಮಾತನಾಡುವಾಗ ನಾವ್ಯಾರೂ ಕೂಡ ಮಧ್ಯೆ ಎದ್ದು ನಿಂತುಕೊಳ್ಳಲಿಲ್ಲ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಾಗ ಕೇಳುವ ಮನೋಭಾವ ಬೆಳೆಸಿಕೊಳ್ಳಿರಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ತಮ್ಮ ನಿಲುವೇನು, ತಮ್ಮ ಸರ್ಕಾರದ ಉದ್ದೇಶವೇನೆಂದು ತಿಳಿಸಿದರು. ಭಾರತೀಯ ಜನತಾ ಪಕ್ಷದ ಪತಿಯಿಂದ ಸುಮಾರು 79 ಶಾಸಕರುಗಳನ್ನು ಜನರು ವಿಧಾನಸಭೆಗೆ ಆಯ್ಕೆ ಮಾಡಿ ಕಳುಹಿಸಿದ್ದಾರೆ. ನಾವು ಏನು ಕಂಡೆವೆಂದರೆ, ಆ ಮೌಢ್ಯತೆಯ ಕಾರ್ಯಕ್ರಮದ ಮೂಲಕ ಬಡವರನ್ನು ಆಕರ್ಷಿಸುವ ಮೂಲಕ ಮತಾಂತರಕ್ಕೆ ಅವಕಾಶವಾಗಬಾರದು. "ನೀವು ಲಕ್ಷಾಧೀಶರಾಗುತ್ತೀರಿ" ಎಂಬ ಮೋಸದ ಜಾಲಕ್ಕೆ ನಮ್ಮ ಕಡು ಬಡವರು ಬಲಿಯಾಗಬಾರದು. ಆ ಕಾರ್ಯಕ್ರಮಕ್ಕೆ ಬಂದಂತಹ ಸಾವಿರಾರು ಜನರು ಕೈಕಾಲು ಇಲ್ಲದವರು ಶಾಪ ಹಾಕಿ ತೆರಳಿದ್ದಾರೆ. ಅಲ್ಲಿನ ಕಾರ್ಯಕ್ರಮದ ವೇದಿಕೆ ಮೇಲಿದ್ದವರ ಕೈ ಮುಟ್ಟಿ, ತಲೆ ಮುಟ್ಟುವ ಮುಖಾಂತರ 'ನಮಗೆ ಹುಷಾರಾಯಿತು. ನಮಗೆ ಕೈ ಬಂತು, ಕಾಲು ಬಂತು' ಎಂದು ಹೇಳಿದವರೆಲ್ಲರೂ ಪೂರ್ವಯೋಜಿತವಾಗಿ ತರಬೇತಿ ಕೈಗೊಂಡೇ ಇದನ್ನು ಮಾಡಿರುವುದು. ಅದಕ್ಕೆ ಸರ್ಕಾರ ಹೋಗಿ ಬಿದ್ದುಕೊಳ್ಳುವಂತಾದ್ದು. ಈ ರೀತಿಯ ಕಾರ್ಯಕ್ರಮದಿಂದ ಬಡವರಿಗೆ ಪ್ರಚೋದನೆ ಕೊಟ್ಟಂತಾಗುತ್ತದೆಂಬುದು ನಮ್ಮ ಉದ್ದೇಶವಾಗಿದೆ. ಇನ್ನು ಎರಡನೆಯದಾಗಿ, ಮುಖ್ಯಮಂತ್ರಿಗಳಾದ ತಾವು ಹೇಳಿದಂತೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ವಿರೋಧ ಪಕ್ಷದಲ್ಲಿರುತ್ತಾರೆ, ಯಾರು ಆಡಳಿತ ಪಕ್ಷದಲ್ಲಿರುತ್ತಾರೆಂಬುದನ್ನು ಮಾಲೀಕರಾಗಿರುವ ಮತದಾರರು ತೀರ್ಮಾನ ಮಾಡುತ್ತಾರೆ. ತಾವು ಇದನ್ನು ನಿರೀಕ್ಷಿಸಿದ್ದಿರಾ? ಇವೊತ್ತು ತಾವು ದಯನೀಯ ಸ್ಥಿತಿಗೆ ಬಂದು ಜೆ.ಡಿ.(ಎಸ್)ನ ಬೆಂಬಲದೊಂದಿಗೆ ರಾಜ್ಯವನ್ನು ಎರಡು ಭಾಗ ಮಾಡಿಕೊಂಡಿದ್ದೀರಿ! 'ನಿಮ್ಮದು ಇದು, ನಮ್ಮದು ಅದು' ಎಂದು; ಈ ಕಚ್ಚಾಟ, ಬಡಿದಾಟಗಳಲ್ಲೇ ನೀವು ತಲ್ಲೀನರಾಗಿದ್ದೀರಿ. ಅಭಿವೃದ್ಧಿ ಕೆಲಸ ಕಾರ್ಯಗಳ ಬಗ್ಗೆ ನಾವು ಹೋರಾಟ ಮಾಡಿಲ್ಲವೇ? ಏನು ಸರಿ ಇದೆ, ಹೇಳಿ? ಈ ರಾಜ್ಯ ಇಬ್ಭಾಗವಾಗಿದೆ. ಮಂತ್ರಿಮಂಡಲದಲ್ಲಿ ಸಾಮರಸ್ಯ ಇಲ್ಲ, ಅಭಿವೃದ್ಧಿ ಕಾರ್ಯಗಳೆಡೆಗೆ ಗಮನಹರಿಸುವುದಕ್ಕಾಗಿಲ್ಲ. ಅತೃಪ್ತ ಶಾಸಕರುಗಳನ್ನು ತೃಪ್ತಿಪಡಿಸುವುದರಲ್ಲೇ ತಲ್ಲೀನರಾಗಿದ್ದೀರಿ. ಇಂತಹ ಪರಿಸ್ಥಿತಿಯಲ್ಲಿ ಜನರು ಮುಂದೆ ಏನು ಮಾಡುತ್ತಾರೆಂದು ಅವರೇ ತೀರ್ಮಾನ ಮಾಡುತ್ತಾರೆ. ಅದರೆ, 'ಜನರ ಸಮಸ್ಯೆಯನ್ನು ತೆಗೆದುಕೊಂಡು ಹೋರಾಟ ಮಾಡಿ' ಎಂದು ನೀವು ಹೇಳಿದಿರಲ್ಲಾ ಭಾರತೀಯ ಜನತಾ ಪಕ್ಷ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡುತ್ತಿಲ್ಲವೇ? ರೈತರ, ಬಡವರ ಪರ ಹೋರಾಟ ಮಾಡುತ್ತಿಲ್ಲವೇ? ತಾವು ಇವೊತ್ತು ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಜನರಿಗೆ ಅಪಮಾನವೆಸಗಿದ್ದೀರಿ. ನೀವು ಮುಖ್ಯಮಂತ್ರಿಯಾಗಿ ನೀವು ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹಕ್ಕು ಕಳೆದುಕೊಂಡಿದ್ದೀರಿ. ಇವು ನಮ್ಮ ಆಪಾದನೆಗಳು. "ಬಹುಮತ ಇದೆ, ನಾನು ಮುಖ್ಯಮಂತ್ರಿಯಾಗಿ ಮುಂದುವರೆಯುತ್ತೇನೆ" ಎಂದರೆ ನನ್ನದೇನೂ ಅಭ್ಯಂತರವಿಲ್ಲ 'ರಾಜೀನಾಮೆ ಕೊಡಿ' ಎಂದು ಬಲವಂತವಾಗಿ ಹೇಳುವುದಕ್ಕೆ ನಾನ್ಯಾರು? ಆದರೆ, ವ್ಯವಸ್ಥಿತವಾದ, ಮತಾಂತರದ ಈ ಕುತಂತ್ರಕ್ಕೆ ತಾವು ಬಲಿಯಾದಿರಿ. ಸರ್ಕಾರವೇ ಇದಕ್ಕೆ ಪ್ರೇರಣೆ ಕೊಟ್ಟಿತೆಂಬುದು ನನ್ನ ಆಪಾದನೆ. That's all.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇನು ಕೆಲವು ಪದಗಳನ್ನು ಬಳಕೆ ಮಾಡಿದ್ದಾರೆ. ಅವು not in good taste. ಶ್ರೀಮತಿ ಸೋನಿಯಾಗಾಂಧಿಯವರ ಬಗ್ಗೆ ಏನು ಪದ ಬಳಕೆ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ. ತಾವೇನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದಕ್ಕೆ ನಾನು ಬದ್ಧನಾಗಿದ್ದೇನೆ, ನೀವು ಸುಪ್ರೀಮ್, ಅದರ ಬಗ್ಗೆ ಎರಡು ಮಾತಿಲ್ಲ. ನಿಮ್ಮ ಕೊಠಡಿಗೆ ಹೋಗಿ ಅದನ್ನು ನೋಡಿ ನಾವು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದ್ದೇವೆ ನೋಡಿ, ಹಿಂದೆ ದಾಖಲೆಗಳು ಇದ್ದಾವೆ, ಅನಂತರ ತಾವು ಏನು ಹೇಳುತ್ತೀರೋ ಅದಕ್ಕೆ ನಾನು ತಲೆಬಾಗುತ್ತೇನೆ. That is all my request. ಅವಸರ ಬೇಡ, ನೀವು ನೋಡಿ ಆಮೇಲೆ ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು : good taste ನಲ್ಲಿ ಯಾವ್ಯಾವುದು ಇಲ್ಲ ಅವೆಲ್ಲವನ್ನೂ ಕಡತದಿಂದ ನಾನು ತೆಗೆದುಹಾಕುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮೌಢ್ಯಗಳ ಬಗ್ಗೆ ಮಾತನಾಡಿದ್ದಾರಲ್ಲಾ, ಈ ರಾಜ್ಯದಲ್ಲಿ ಡಾ. ಹೆಚ್. ನರಸಿಂಹಯ್ಯನವರ ಮುಂದಾಳತ್ವದಲ್ಲಿ ಮೌಢ್ಯಗಳ ವಿರುದ್ಧ ಹೋರಾಟ ಮಾಡಿದಾಗ ಭಾರತೀಯ ಜನತಾ ಪಕ್ಷದವರು ಎಲ್ಲಿ ಹೊಗೀದ್ದರು? ಆವತ್ತು ಆ ಮೌಢ್ಯದ ವಿರುದ್ಧ ಹೋರಾಟ ಮಾಡಿದ್ದರು. ಆದರೆ ಇವತ್ತು ಇವರಿಗೆ ಇದು ಬರುತ್ತದೆ, ಅವತ್ತು ಮೌಢ್ಯಗಳು ಬರಲಿಲ್ಲವೆ? ಮಾತನಾಡುವುದಕ್ಕೂ ಒಂದು ಇತಿಮಿತಿ ಇರಬೇಕು.

(ಆ) ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ: (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರು ಹೊರಗಡೆ ಮಾತನಾಡುವ ಸಂದರ್ಭದಲ್ಲಿ ಸಹಕಾರಿ ಸಂಘಗಳ ಸಾಲದ ಮೇಲಿರುವ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ವಜಾ ಮಾಡುತ್ತೇವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ಬಜೆಟ್ ಅಧಿವೇಶನದಲ್ಲಿ ಮಾಡುತ್ತೇವೆಂದು ಮಾತನಾಡಿದ್ದಾರೆ, ಇದುವರೆಗೆ ಸರ್ಕಾರದ ಒಂದು ಸುತ್ತೋಲೆ ಇತ್ತು, ಯಾವುದೇ ಸಹಕಾರಿ ಸಂಘದ ಸಾಲ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನ ಸಾಲವನ್ನು ವಸೂಲಿ ಮಾಡಬೇಕಾದರೆ ಜಪ್ತಿ ಮಾಡುವುದಾಗಲಿ, ಹರಾಜು ಮಾಡುವುದಾಗಲಿ ನಿಷೇಧವಾಗಿತ್ತು. ಆದರೆ ಈಗ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಒಂದು ಕಾಗದವನ್ನು ಬರೆದು ಸಹಕಾರ ಸಂಘಗಳಿಗೆ ಆ ನಿಬಂದನೆಗಳೇನಿತ್ತು ಅದನ್ನು ವಿತ್‌ಡ್ರಾ ಮಾಡಿಕೊಂಡು ಎಲ್ಲಾ ಪಿಎಲ್‌ಡಿ ಬ್ಯಾಂಕ್‌ನವರು ಹರಾಜಿಗೆ ಇಸ್ತಿಯಾರ್‌ನ್ನು ಇಶ್ಯೂ ಮಾಡಿದ್ದಾರೆ. ಸೋಮವಾರದಿಂದ ಹರಾಜನ್ನು ನಿಗದಿ ಮಾಡಿಕೊಂಡು ಬಂದಿದ್ದಾರೆ. ಒಂದು ಕಡೆ ಬರಗಾಲ ಬಂದು ಜನರು ಬೇಗೆಯಲ್ಲಿದ್ದಾರೆ, ಇನ್ನೊಂದು ಕಡೆ ಮುಂದಿನ ಅಧಿವೇಶನದಲ್ಲಿ ಇದನ್ನು ಪರಿಶೀಲನೆ ಮಾಡುತ್ತೇನೆಂಬ ತಮ್ಮ ಹೇಳಿಕೆ ಇದೆ. ದಯಮಾಡಿ ಒಂದು ಆದೇಶ ಹೊರಡಿಸಬೇಕು, ನೀವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರೆಗೆ ಹರಾಜು, ಜಪ್ತಿ ಮಾಡುವ ಕೃತ್ಯ ಮತ್ತು ಒತ್ತಾಯ ಮಾಡಿ ವಸೂಲಿ ಮಾಡುವ ಕೆಲಸವನ್ನು ತಾವು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.